# NEWS CLIPPINGS

**-Media Coverage Archive-**

## 01-07-2026 TO 31-07-2026

*Udayavani 02-07-2026*

# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ – ಅಲೋಶಿಯಸ್ ಕಾಲೇಜು ಒಪ್ಪಂದ



**ಪಿಲಿಕುಳ, ಜು.2:** ಸಸ್ಯಗಳ ವೈವಿಧ್ಯತೆ, ಸಂರಕ್ಷಣೆ ಹಾಗೂ ಔಷಧೀಯ ಸಸ್ಯಶಾಸ್ತ್ರದ ಕುರಿತ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸುವ ಉದ್ದೇಶದಿಂದ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು (ಪರಿಗಣಿತ ವಿಶ್ವವಿದ್ಯಾನಿಲಯ)ದ ಸಸ್ಯಶಾಸ್ತ್ರ ವಿಭಾಗ ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಸ್ಯಕಾಶಿ ವಿಭಾಗದ ನಡುವೆ ಪರಸ್ಪರ ಸಹಕಾರ ಒಪ್ಪಂದಕ್ಕೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಸಹಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂತ ಅಲೋಶಿಯಸ್ ಕಾಲೇಜು(ಪರಿಗಣಿತ ವಿಶ್ವವಿದ್ಯಾನಿಲಯ) ಸಹ ಕುಲಾಧಿಪತಿ ರೆ| ಫಾ| ಮೆಲ್ವಿನ್ ಡಿ'ಕುನ್ಹಾ, ಸಹಭಾಗಿತ್ವ ಘಟಕದಅಧ್ಯಕ್ಷಡಾ| ರೋಶನ್, ಸಸ್ಯಶಾಸ್ತ್ರ ವಿಭಾಗದ ಡಾ| ಜ್ಯೋತಿ ಮಿರಾಂಡ, ಶಿಲ್ಪಾ, ಸನಾ ಶೇಕ್ ಮತ್ತು ಅಕ್ಷತಾ ಆರ್. ಅಮಿನ್ ಹಾಗೂ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶ್ರೀಕಾಂತ್ ರಾವ್, ಆಡಳಿತಾಧಿಕಾರಿ ಡಾ| ಅಶೋಕ್ ಕೆ.ಆರ್., ವೈಜ್ಞಾನಿಕಾಧಿಕಾರಿ ರಾಮಕೃಷ್ಣ ಮರಾಟಿ, ಕ್ಯುರೇಟರ್ ಜಗನ್ನಾಥ್ ಹಾಗೂ ಕಮ್ಯುನಿಟಿ ಮೊಬಿಲೈಸರ್ ಶಿವರಾಮ್, ಹೃತಿಕ್, ವಿಕ್ಟರ್ ಉಪಸ್ಥಿತರಿದ್ದರು.

Times of India 03-07-2026


# First printed Tulu play 'Jana Marl' gets English translation, set for release

Times News Network

**Mangaluru:** 'Jana Marl', the first printed Tulu play, has been translated into English and will be released by month-end.

Written by freedom fighter and social reformer Madhava Thingalaya, the play was originally published in 1933.

Taranath Gatti Kapikad, president of the Karnataka Tulu Sahitya Academy, told TOI that the idea behind the English translation is to take Tulu literature to the international level, beginning with national outreach. He noted that while Tulu remains geographically limited, translating such works would help them reach a wider audience across the country, and eventually, internationally.



ONE OF A KIND: The cover page of 'Jana Marl'

The academy also plans to circulate the translated work among universities and libraries in different states to encourage academic engagement and research, he said.

Kapikad highlighted that Thingalaya was a prominent dramatist of his time, despite having lived only up to the age of 21. During his short life, he is said to have written around 30 plays, many of which focused on social reform.

He said his works addressed issues such as superstition, lack of education and social evils, while promoting awareness and progressive thinking among people, and were driven by a clear social reform agenda rooted in nationalism, Gandhian ideals and movements.

Kapikad added that the themes explored in the play remain relevant today and stressed the need to reintroduce it to contemporary audiences through translation.

The English translation has been undertaken by Dr Sylvia Rego, Professor of English at St Aloysius (deemed to be university), who has previously translated books on folktales, plays and others.

Dr Rego noted that the play reflects national concerns at a regional level and said that Thingalaya used drama as a vehicle to carry these ideas to the masses. She added that theatre acts as a medium that bridges these worlds. The book is in the final stages of printing, with the academy indicating that the release will take place by the end of the month.

Udayavani 06-07-2026

# ಸೈಂಟ್ ಅಲೋಶಿಯಸ್ ತಾಂತ್ರಿಕ ಡಿಪ್ಲೊಮಾ ಕೇಂದ್ರ 'ವೇವ್ಸ್-26 ಫ್ಯಾಶನ್ ಶೋ', ಬೀಳ್ಕೊಡುಗೆ ಸಮಾರಂಭ

**ಮಹಾನಗರ, ಜು. 5:** ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ತಾಂತ್ರಿಕ ಡಿಪ್ಲೊಮಾ ಕೇಂದ್ರದ ವತಿಯಿಂದ ಜು.3ರಂದು ಎಲ್. ಎಫ್. ರಾಸ್ಕಿನ್ಹ ಸಭಾಂಗಣದಲ್ಲಿ 'ವೇವ್ಸ್-26 ಫ್ಯಾಶನ್ ಶೋ' ಮತ್ತು ಬೀಳ್ಕೊಡುಗೆ ಸಮಾರಂಭ ಜರಗಿತು.

ಮುಖ್ಯ ಅತಿಥಿಯಾಗಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಆ್ಯಂಕರ್ ವಿ. ಜೆ. ಡಿಕ್ಸನ್ ಪಾಲ್ಗೊಂಡಿದ್ದರು. ಗೌರವ ಅತಿಥಿಯಾಗಿ ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕುಲ ಸಚಿವ ಡಾ| ರೊನಾಲ್ಡ್ ನಜರೆತ್ ಉಪಸ್ಥಿತರಿದ್ದರು.

ವಿಶೇಷ ಅತಿಥಿಗಳಾಗಿ ಮಾಡೆಲ್ ಹಾಗೂ ಪ್ರಾಧ್ಯಾಪಕಿ ಜೆನಿಟಾ, ಡಿಜಿಟಲ್ ಕ್ರಿಯೇಟರ್ ಚೈತ್ರಾ ಪ್ರಮೋದ್ ಭಾಗವಹಿಸಿದ್ದರು.

ತಾಂತ್ರಿಕ ಡಿಪ್ಲೊಮಾ ಕೇಂದ್ರದ ಸಂಯೋಜಕರಾದ ಅತೀ ವಂದನೀಯ ಫಾ| ಜಾನ್ ಡಿ'ಸೋಜಾ ಎಸ್. ಜೆ., ಸೈಂಟ್ ಅಲೋಶಿಯಸ್ ಐಟಿಐ ಪ್ರಾಂಶುಪಾಲ ರೋಷನ್ ಡಿ'ಸೋಜಾ ಹಾಗೂ ಕಾರ್ಯಕ್ರಮದ ಸಂಚಾಲಕಿ ರಮ್ಯಾ ಉಪಸ್ಥಿತರಿದ್ದರು.



ಫ್ಯಾಷನ್ ಶೋ ಸ್ಪರ್ಧೆಯ ವಿಜೇತರನ್ನು ಸಮ್ಮಾನಿಸಲಾಯಿತು. ದೀಪಿಕಾ ಅವರು ಅತ್ಯುತ್ತಮ ವಿನ್ಯಾಸಕಿ ಹಾಗೂ ಸೃಜನಾತ್ಮಕ ವಿನ್ಯಾಸ ಪ್ರಶಸ್ತಿ ಪಡೆದರು.

ವಿಲ್ಮಾ ಅವರು ರನ್ನರ್-ಅಪ್ ಪ್ರಶಸ್ತಿ ಪಡೆದರು. ಶಿಲ್ಪಾ ಅವರಿಗೆ ಅತ್ಯುತ್ತಮ ವಿಷಯ ನಿರೂಪಣೆ ಪ್ರಶಸ್ತಿ, ಶರೀನ್ ಮರಿಯಾ ಅವರು ಅತ್ಯುತ್ತಮ ಮಹಿಳಾ ಮಾಡೆಲ್ ಪ್ರಶಸ್ತಿ , ಗೌತಮ್ ಅವರು ಅತ್ಯುತ್ತಮ ಪುರುಷ ಮಾಡೆಲ್ ಪ್ರಶಸ್ತಿ ಪಡೆದರು. ಅತ್ಯುತ್ತಮ ಯೋಜನೆ ಪ್ರಶಸ್ತಿಯನ್ನು ದೀಕ್ಷಿತಾ, ಶಿಲ್ಪಾ, ಕ್ರಿಸ್ಟಿನಾ ಡೆಬೋರಾ, ಸಮೀಯಾ ಬಾನು, ಜೇಶಾ ಅಮನ್, ಶಬಾ ಬೇಗಂ ಹಾಗೂ ಅರ್ಶಿಧಾ ಅವರ ತಂಡ ಪಡೆದುಕೊಂಡಿತು. ಕಾರ್ಯಕ್ರಮವನ್ನು ರಿಯಾ ಸೋನಲ್ ನಜರೆತ್ ನಿರೂಪಿಸಿದರು.

*Prajavani 08-07-2026*

# ಕೊಂಕಣಿ ಅಧ್ಯಯನ ಕೋರ್ಸ್: ಆಹ್ವಾನ

ಮಂಗಳೂರು: ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವ ವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಕೊಂಕಣಿ, ಸ್ಕೂಲ್ ಆಫ್ ಲಾಂಗ್ವೇಜಸ್ ಆ್ಯಂಡ್ ಕಲ್ಚರಲ್ ಸ್ಟಡೀಸ್ ನಡೆಸುವ 'ಕೊಂಕಣಿ ಪ್ರತಿಭಾ' ಕೊಂಕಣಿ ಭಾಷೆ ಮತ್ತು ಸಾಂಸ್ಕೃತಿಕ ಅಧ್ಯಯನದ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ.

ಪದವಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಅರ್ಜಿ ಸಲ್ಲಿಸಬಹುದು. 2 ಹಂತದಲ್ಲಿ ಕೋರ್ಸ್ ನಡೆಯುತ್ತದೆ. ಪ್ರತಿ ಹಂತ 6 ತಿಂಗಳ ಅವಧಿಯದಾಗಿರುತ್ತದೆ. ಕಂಬೈನಿಂಗ್ ಕ್ಲಾಸ್, ಆನ್‌ಲೈನ್ ಮೂಲಕ ತರಗತಿ ನಡೆಯುತ್ತದೆ. ಕೃತಕ ಬುದ್ಧಿಮತ್ತೆ ಸಂಯೋಜಿತ ಪಠ್ಯಕ್ರಮ ಹಾಗೂ ರೋಮನ್, ದೇವನಾಗರಿ, ಕನ್ನಡ ಲಿಪಿ ಬಳಸಿ ಕೊಂಕಣಿ ಕಲಿಯಬಹುದು. ಅಭ್ಯರ್ಥಿ ಗಳು ಪಿಯುಸಿ ಅಥವಾ ತತ್ಸಮಾನ ಕೋರ್ಸ್ ಉತ್ತೀರ್ಣರಾಗಿರಬೇಕು. ಜುಲೈ 31ರೊಳಗೆ ಪ್ರಥಮ ಹಂತದ ಕೋರ್ಸ್‌ಗೆ ಅರ್ಜಿ ಸಲ್ಲಿಸಲು ಕೊನೆಯ ದಿನ. https://lms.staloysius.edu.in/courses-details/konkani-pratibha-i ಲಿಂಕ್ ಬಳಸಿ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ ಸಂಸ್ಥೆಯ ಕೊಂಕಣಿ ವಿಭಾಗ ಮುಖ್ಯಸ್ಥೆ ಫ್ಲೋರಾ ಕ್ಯಾಸ್ತಲಿನೊ ಮೊ: 78296 52470, ಕಚೇರಿ: 9481527394 ಅಥವಾ instituteofkonkani@staloysius.edu.in ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

*The Hindu 08-07-2026*

# Aloysius university invites applicants for Konkani courses

**The Hindu Bureau**
MANGALURU

The Institute of Konkani, at St. Aloysius (Deemed to be University), Mangaluru, has invited applications for its Konkani Pratibha I and II Certificate Courses.

The programme is open to undergraduate students as well as members of the general public who wish to learn the Konkani language. The course is offered in two levels – Konkani Pratibha I and Konkani Pratibha II. The course duration is six months for each level, comprising 30 hours of instruction. Candidates who have completed Konkani Pratibha I are eligible to enrol for Konkani Pratibha II.

The programme features an AI-empowered syllabus, the flexibility to study Konkani in Roman, Devanagari, or Kannada script, with periodic online and classroom sessions.

Applicants should have passed Pre-University (or equivalent). The course fee is ₹500 per level.

Interested candidates may submit their applications on or before 31 July for Konkani Pratibha I.

*Varthabharathi 09-07-2026*

# ಕೊಂಕಣಿ ಪ್ರತಿಭಾ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಮಂಗಳೂರು, ಜು.8: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಭಾಷಾ ಮತ್ತು ಸಾಂಸ್ಕೃತಿಕ ಅಧ್ಯಯನ ಶಾಲೆಯ ಕೊಂಕಣಿ ಸಂಸ್ಥೆಯು ಕೊಂಕಣಿ ಭಾಷೆ ಮತ್ತು ಸಾಂಸ್ಕೃತಿಕ ಅಧ್ಯಯನವನ್ನೊಳಗೊಂಡ ಕೊಂಕಣಿ ಪ್ರತಿಭಾ ಐ ಮತ್ತು ಐಐ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದ್ದು, ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕೊಂಕಣಿ ಭಾಷೆಯನ್ನು ಕಲಿಯಲು ಮತ್ತು ಅದರ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ತಿಳುವಳಿಕೆಯನ್ನು ಪಡೆಯಬಯಸುವ ಪಿಯುಸಿ ಪಾಸಾದ/ಪದವಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗಾಗಿ ಆಯೋಜಿಸಲಾಗಿದೆ.

ಈ ಕೋರ್ಸ್‌ಅನ್ನು ಕೊಂಕಣಿ ಪ್ರತಿಭಾ ಐ ಮತ್ತು ಕೊಂಕಣಿ ಪ್ರತಿಭಾ ಐಐ ಎಂಬ ಎರಡು ಹಂತಗಳಲ್ಲಿ ನೀಡಲಾಗುತ್ತದೆ. ಪ್ರತೀ ಹಂತವು ಆರು ತಿಂಗಳ ಅವಧಿಯ (ಒಂದು ಸೆಮಿಸ್ಟರ್) 30 ಗಂಟೆಗಳ ಬೋಧನೆಯನ್ನು ಒಳಗೊಂಡಿರುತ್ತದೆ. ಈ ಕಾರ್ಯಕ್ರಮವು ಎಐ-ಸಬಲೀಕೃತ ಪಠ್ಯಕ್ರಮ, ರೋಮನ್, ದೇವನಾಗರಿ ಅಥವಾ ಕನ್ನಡ ಲಿಪಿಯಲ್ಲಿ ಕೊಂಕಣಿಯನ್ನು ಅಧ್ಯಯನ ಮಾಡಲು ನಮ್ಯತೆ ಮತ್ತು ನಿಯತಕಾಲಿಕ ಆನ್‌ಲೈನ್ ಮತ್ತು ತರಗತಿ ಅವಧಿಗಳೊಂದಿಗೆ ಸಂಯೋಜಿತ ಬೋಧನಾ ವಿಧಾನವನ್ನು ಒಳಗೊಂಡಿದೆ. ಕೊಂಕಣಿ ಪ್ರತಿಭಾ ಐ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳು ಕೊಂಕಣಿ ಪ್ರತಿಭಾ ಐಐಗೆ ದಾಖಲಾಗಲು ಅರ್ಹರಾಗಿರುತ್ತಾರೆ.

ಕೋರ್ಸ್ ಶುಲ್ಕ ಪ್ರತೀ ಹಂತಕ್ಕೆ 500 ರೂ. ಆಗಿದ್ದು ಆಸಕ್ತ ಅಭ್ಯರ್ಥಿಗಳು ಕೊಂಕಣಿ ಪ್ರತಿಭಾ ಐಗಾಗಿ ಜು.31ರೊಳಗೆ https://lms.staloysius.edu.in/courses-details/konkani-pratibha-ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ ಪ್ರೊ.ಕ್ಯಾಸ್ಟೆಲಿನೊ, ಮುಖ್ಯಸ್ಥರು, ಕೊಂಕಣಿ ವಿಭಾಗ, ಸಂತ ಅಲೋಶಿಯಸ್ ಪರಿಗಣಿತ ವಿವಿ, ಮಂಗಳೂರು ಇವರ ಮೊ.ಸಂ.: 7829652470 ಅಥವಾ ಇ-ಮೇಲ್: instituteofkonkanistaloysius.edu.in ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟನೆ ತಿಳಿಸಿದೆ.

*Udayavani 12-07-2026*

# ದಿಟ್ಟ ದಿವ್ಯಾಂಗ ಮಹಿಳೆ ಹೆಲೆನ್ ಕೆಲ್ಲರ್: ಅಲೆವೂರಾಯ



ಮಹಾನಗರ, ಜು.11: ದೈಹಿಕ ನ್ಯೂನತೆ ಮೆಟ್ಟಿ ನಿಂತು ಚರಿತ್ರೆಯಲ್ಲಿ ವಿಶೇಷ ಸ್ಥಾನ ಪಡೆದ ಕವಯಿತ್ರಿ, ಸ್ತ್ರೀಯರ ಪರವಾಗಿ ಹೋರಾಟ ನಡೆಸಿದ ದಿಟ್ಟ ದಿವ್ಯಾಂಗ ಮಹಿಳೆ ಹೆಲೆನ್ ಕೆಲ್ಲರ್ ಎಂದು ಯಕ್ಷಗುರು ವರ್ಕಾಡಿ ರವಿ ಅಲೆವೂರಾಯ ಹೇಳಿದರು.

ಸಂತ ಅಲೋಶಿಯಸ್ ಕಾಲೇಜಿನಲ್ಲಿ ಸಹೋದಯ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಹೆಲೆನ್ ಕೆಲ್ಲರ್ ನೆನಪು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಹೋದಯ ಸಂಸ್ಥೆಯ ಅಧ್ಯಕ್ಷ ವಂ।ರೋಶನ್, ಭೂಮಿಕಾ, ಎ. ಮತ್ತು ಅಕ್ಷಿತಾ ರಾಮಚಂದ್ರ ಅಮೀನ್ ಅವರು ವೇದಿಕೆಯಲ್ಲಿದ್ದರು. ಕಾಲೇಜಿನ ಹಳೆ ವಿದ್ಯಾರ್ಥಿ, ದಿವ್ಯಾಂಗರೂ, ಹಾಗೂ ಉಪನ್ಯಾಸಕರೂ ಆದ ಅನ್ವಿತ್ ಕುಮಾರ್‌ತಮ್ಮ ಕಲಿಕೆಯ ಕಾಲದ ಅನುಭವಗಳನ್ನು ಹಂಚಿಕೊಂಡರು. ವಿದ್ಯಾರ್ಥಿ ಅಧ್ಯಕ್ಷೆ ಅಕ್ಷತಾ ನಿರ್ವಹಿಸಿದರು.

ಕಾರ್ಯದರ್ಶಿ ವಿಶಾಲ್ ವಂದಿಸಿದರು. ಉಪನ್ಯಾಸಕ ವಿನಯ್ ಡಿ.ಆರ್. ಉಪನ್ಯಾಸಕ ರೋಶನ್, ವಿದ್ಯಾರ್ಥಿಗಳು ಇದ್ದರು.

*Indian Express*
*08-07-2026*

# St Aloysius introduces Konkani courses

EXPRESS NEWS SERVICE
@ Mangaluru

THE Institute of Konkani, School of Languages and Cultural Studies, St Aloysius (Deemed to-be University), Mangaluru, has invited applications for its Konkani Pratibha I & II Certificate Courses in Konkani Language and Cultural Studies. The programme is open to undergraduate students as well as the general public who wish to learn the Konkani language and gain an understanding of its rich cultural heritage.

The course is offered in two levels: Konkani Pratibha I and Konkani Pratibha II. Each level is of six months duration (one semester), comprising 30 hours of instruction and is conducted in hybrid mode, combining classroom and online learning. Candidates who have completed Konkani Pratibha I are eligible to enrol for Konkani Pratibha II. The programme features an AI-empowered syllabus, flexibility to study Konkani in Roman, Devanagari, or Kannada script, and a blended teaching approach with periodic online and classroom sessions. Applicants should have passed PUC (or equivalent). The course fee is Rs 500 per level. Interested candidates may submit their applications on or before 31 July 2026 for Konkani Pratibha I. Click the Link to apply: https://lms.staloysius.edu.in/courses-details/konkani-pratibha-i For further details, contact: Flora Castelino, Head, Department of Konkani on 78296 52470

*Times of India 10-07-2026*

# Apply for Konkani certificate courses

**Mangaluru:** The Institute of Konkani, School of Languages and Cultural Studies at St Aloysius (Deemed to be University) has invited applications for its Konkani Pratibha I and II certificate courses in Konkani and cultural studies. According to a release from the institute, the programme is open to undergraduate students and the general public. Offered in two levels, each course runs for six months (one semester) with 30 hours of instruction in a hybrid format combining classroom and online sessions.

Candidates who complete Pratibha I are eligible for Pratibha II. The course features an AI-enabled syllabus, flexibility to learn in Roman, Devanagari or Kannada scripts, and a blended teaching approach. Applicants must have passed PUC or equivalent.

The fee is Rs 500 per level. Applications are open till July 31. TNN

*Prajavani 16-07-2026*

# ನಾಳೆಯಿಂದ 'ಮಾನ್ಸೂನ್ ರಂಗಭೂಮಿ ಉತ್ಸವ'

ಮಂಗಳೂರು: ನಗರದ ಸೇಂಟ್ ಅಲೋಶಿಯಸ್ ವಿ.ವಿ.ಯ ರಂಗ ಅಧ್ಯಯನ ಕೇಂದ್ರವು ಅರೆಹೊಳೆ ಪ್ರತಿಷ್ಠಾನ, ಅಸ್ತಿತ್ವ (ನೋಂದಣಿ), ಕನ್ನಡ ವಿಭಾಗ ಮತ್ತು ಭಾಷೆ ಮತ್ತು ಸಾಂಸ್ಕೃತಿಕ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಜುಲೈ 17ರಿಂದ 19ರವರೆಗೆ 'ಮಾನ್ಸೂನ್ ರಂಗಭೂಮಿ ಉತ್ಸವ - 2026' ಹಮ್ಮಿಕೊಂಡಿದೆ.

ಜುಲೈ 17ರಂದು ಅರೆಹೊಳೆ ಪ್ರತಿಷ್ಠಾನದ ರಂಗನಾಥ ರಂಗಭೂಮಿ ಶಿಬಿರದಲ್ಲಿ ಪಾಲ್ಗೊಂಡಿದ್ದ ಮಕ್ಕಳು 'ಮಾನವಪುರ' ನಾಟಕ ಪ್ರಸ್ತುತಪಡಿಸುವರು. ಅನಂತರ ನಂದಗೋಕುಲ ಕಲಾವಿದರು ನೃತ್ಯ ರಂಗಭೂಮಿ ನಿರ್ಮಾಣದ 'ಬಾರ್ಕೂರಿನ ಹಡ್ಗ'
ಪ್ರದರ್ಶಿಸಲಿದ್ದಾರೆ.

18ರಂದು ರವೀಂದ್ರ ಗುರುರಾಜ ಕಟೋಟಿ ಅವರ ಕಲ್ಪನೆ ಮತ್ತು ವಿದ್ವಾನ್ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಅವರ ನಿರ್ದೇಶನದ 'ರಾಗಸಂಧಾನ' ನಾಟಕ ಪ್ರದರ್ಶನ ನಡೆಯಲಿದ್ದು, ಈ ನಿರ್ಮಾಣದಲ್ಲಿ ಹಿಂದೂಸ್ತಾನಿ ಗಾಯಕ ಸಿದ್ಧಾರ್ಥ ಬೆಳ್ಮಣ್ಣು ಅವರು ಹಾಡುವುದರ ಜೊತೆಗೆ ನಾಟಕದಲ್ಲಿ ಭಾಗವಹಿಸಲಿದ್ದಾರೆ.

19ರಂದು, ಮಣಿಪಾಲದ ಪುನಃ ಥಿಯೇಟರ್ ಉಷಾ ಕಟ್ಟೆಮನೆ ರಚಿಸಿದ, ಅಭಿನವ್ ಗ್ರೋವರ್ ನಿರ್ದೇಶಿಸಿದ 'ಅಂಗಾರ' ನಾಟಕ ಪ್ರದರ್ಶನ ನಡೆಯಲಿದೆ. ಕಾರ್ಯಕ್ರಮ ಅಲೋಶಿಯಸ್ ವಿವಿಯ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯಲಿದೆ. ಆಸಕ್ತರಿಗೆ ಉಚಿತ ಪ್ರವೇಶವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

*Vijayakarnataka 16-07-2026*

# ಅಲೋಶಿಯಸ್‌ನಲ್ಲಿ ಫ್ಯಾಷನ್ ಶೋ

**ವಿಕ ಸುದ್ದಿಲೋಕ** ಮಂಗಳೂರು

ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ತಾಂತ್ರಿಕ ಡಿಪ್ಲೊಮಾ ಕೇಂದ್ರದಿಂದ ವೇವ್ಸ್ -26 ಫ್ಯಾಷನ್ ಶೋ ಮತ್ತು ಬೀಳ್ಕೊಡುಗೆ ಸಮಾರಂಭ ಎಲ್. ಎಫ್.ರಸ್ಕಿನಾ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು.

ನಟ ವಿ.ಜೆ.ಡಿಕ್ಸನ್, ಅಲೋಶಿಯಸ್ ವಿವಿ ರಿಜಿಸ್ಟ್ರಾರ್ ಡಾ.ರೊನಾಲ್ಡ್ ನಜರೆತ್, ಪ್ರಾಧ್ಯಾಪಕಿ ಜನಿತಾ, ವಿತ್ರಾ ಕ್ಲೋಸೆಟ್, ಚೈತ್ರಾ ಪ್ರಮೋದ್, ತಾಂತ್ರಿಕ ಡಿಪ್ಲೊಮಾ ಕೇಂದ್ರದ ಸಂಯೋಜಕ ಫಾದರ್ ಜಾನ್ ಡಿಸೋಜ, ಸೈಂಟ್ ಅಲೋಶಿಯಸ್ ಐಟಿಐ ಪ್ರಿನ್ಸಿಪಾಲ್ ರೋಷನ್ ಡಿಸೋಜ, ಕಾರ್ಯಕ್ರಮದ ಸಂಚಾಲಕಿ ರಮ್ಯಾ ಉಪಸ್ಥಿತರಿದ್ದರು. ಡಿಪ್ಲೊಮಾ ವಿಭಾಗಗಳ ವಿದ್ಯಾರ್ಥಿಗಳು ಫ್ಯಾಷನ್ ಶೋನಲ್ಲಿ ಭಾಗವಹಿಸಿದ್ದು, ದೀಪಿಕಾ ಅತ್ಯುತ್ತಮ ವಿನ್ಯಾಸಕಿ ಮತ್ತು ಸೃಜನಾತ್ಮಕ ವಿನ್ಯಾಸ ಪ್ರಶಸ್ತಿ ಪಡೆದರು. ವಿಲ್ಮಾ ರನ್ನರ್- ಅಪ್ ಪ್ರಶಸ್ತಿ ಪಡೆದರು. ಶಿಲ್ಪಾ ಅವರಿಗೆ ಅತ್ಯುತ್ತಮ ವಿಷಯ ನಿರೂಪಣೆ ಪ್ರಶಸ್ತಿ ಲಭಿಸಿತು. ಶರೀನ್ ಮರಿಯಾ ಅತ್ಯುತ್ತಮ ಮಹಿಳಾ ಮಾಡೆಲ್ ಪ್ರಶಸ್ತಿ, ಗೌತಮ್ ಅತ್ಯುತ್ತಮ ಪುರುಷ ಮಾಡೆಲ್ ಪ್ರಶಸ್ತಿ ಪಡೆದರು. ಅತ್ಯುತ್ತಮ ಪ್ರಾಜೆಕ್ಟ್ ಪ್ರಶಸ್ತಿಯನ್ನು ದೀಕ್ಷಿತಾ, ಶಿಲ್ಪಾ, ಕ್ರಿಸ್ಟಿನಾ ಡೆಬೋರಾ, ಸಮೀಯಾ ಬಾನು, ಜೇಶಾ ಅಮನ್, ಶಬಾ ಬೇಗಂ ಹಾಗೂ ಅರ್ಷಿದಾ ಅವರ ತಂಡ ಪಡೆಯಿತು. ಶಿಲ್ಪಾ ಹಾಗೂ ರಿವಾನ್ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ರಿಯಾ ಸೋನಲ್ ನಜರೆತ್ ಕಾರ್ಯಕ್ರಮ ನಿರೂಪಿಸಿದರು.



ಮಂಗಳೂರು ಅಲೋಶಿಯಸ್ ತಾಂತ್ರಿಕ ಡಿಪ್ಲೊಮಾ ಕೇಂದ್ರದಲ್ಲಿ ಫ್ಯಾಷನ್ ಶೋ ನಡೆಯಿತು.

*The Hindu 16-07-2026*

# St. Aloysius to host three-day Monsoon Theatre Festival

**The Hindu Bureau**
MANGALURU

The Ranga Adhyayana Kendra of St. Aloysius (Deemed to be University) is organising a 3-day "Monsoon Theatre Festival - 2026" from July 17 to 19 featuring children's theatre, dance theatre, a musical theatre production and contemporary drama.

All performances will be held at the LCRI Auditorium, St. Aloysius (Deemed to be University), Mangaluru, beginning at 6.30 p.m. every day. Entry is free.

On July 17, the children's play *Manavapura* will be presented by the participants of the Ranginata Theatre Camp of Arehole Pratishthana, followed by the dance theatre production *Barkurina Hadg* by Nandagokula Kalavidaru.



Mysuru Rangayana artists staging Kannada play 'Mr. Boggis' at St. Aloysius College in April 2025 in Mangaluru. FILE PHOTO

The musical theatre production *Ragasandhana*, conceived by Ravindra Gururaj Katoti and directed by Vidwan Korgi Shankaranarayana Upadhyaya, will be staged on July 18. The production features renowned Hindustani vocalist Sidhartha Belmannu, who will sing as well as perform in the play.

On July 19, Punah Theatre, Manipal will present the contemporary play *Angara*, written by Usha Kattemane and directed by Abhinav Grover.

The festival is being organised in collaboration with Arehole Pratishthana, Astitva-Mangaluru, the Department of Kannada and the Centre for Language and Cultural Studies. The Centre for Theatre Studies has invited theatre enthusiasts, students andthe public to attend the festival in large numbers.



ESTD : 1880

*Varthabharathi 16-07-2026*

# ನಾಳೆಯಿಂದ 'ಮಾನ್ಸೂನ್ ರಂಗೋತ್ಸವ 2026'

ಮಂಗಳೂರು, ಜು.15: ಸಂತ ಅಲೋಶಿಯಸ್ (ಪರಿಗಣಿತ ವಿಶ್ವವಿದ್ಯಾನಿಲಯ)ದ ರಂಗ ಅಧ್ಯಯನ ಕೇಂದ್ರವು ಜು.17ರಿಂದ 19ರವರೆಗೆ 'ಮಾನ್ಸೂನ್ ರಂಗೋತ್ಸವ 2026' ಅನ್ನು ಆಯೋಜಿಸಿದೆ. ಮೂರು ದಿನಗಳ ಈ ರಂಗೋತ್ಸವದಲ್ಲಿ ಮಕ್ಕಳ ನಾಟಕ, ನೃತ್ಯ ರೂಪಕ, ಸಂಗೀತ ನಾಟಕ ಹಾಗೂ ಸಮಕಾಲೀನ ನಾಟಕಗಳು ಪ್ರದರ್ಶನಗೊಳ್ಳಲಿವೆ.

ಜು.17ರಂದು ಅರೆಹೊಳೆ ಪ್ರತಿಷ್ಠಾನದ ರಂಗಿನಾಟ ಶಿಬಿರಾರ್ಥಿಗಳಿಂದ ಮಕ್ಕಳ ನಾಟಕ ಮಾನವಪುರ ಹಾಗೂ ನಂದಗೋಕುಲ ಕಲಾವಿದರಿಂದ ನೃತ್ಯ ರೂಪಕ 'ಬಾರ್ಕೂರಿನ ಹಡ್ಗ' ಪ್ರದರ್ಶನಗೊಳ್ಳಲಿದೆ.

ಜು.18ರಂದು ಡಾ.ರವೀಂದ್ರ ಗುರುರಾಜ ಕಾಟೋಟಿಯವರ ಪರಿಕಲ್ಪನೆಯ ರಾಗಸಂಧಾನ ಸಂಗೀತ ನಾಟಕ ಪ್ರದರ್ಶನವಾಗಲಿದೆ.

ಜು.19ರಂದು ಪುನಃ ಥಿಯೇಟರ್, ಮಣಿಪಾಲ ತಂಡವು ಉಷಾ ಕಟ್ಟೆಮನೆ ರಚನೆಯ 'ಅಂಗಾರ' ನಾಟಕವನ್ನು ಅಭಿನವ್ ಗ್ರೋವರ್ ನಿರ್ದೇಶನದಲ್ಲಿ ಪ್ರಸ್ತುತಪಡಿಸಲಿದೆ.

ಸಂತ ಅಲೋಶಿಯಸ್ ವಿವಿಯ ಎಲ್‌ಸಿಆರ್‌ಐ ಆಡಿಟೋರಿಯಂನಲ್ಲಿ ಪ್ರತಿದಿನ ಸಂಜೆ 6:30ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಎಲ್ಲ ಪ್ರದರ್ಶನಗಳಿಗೆ ಉಚಿತ ಪ್ರವೇಶವಿರಲಿದೆ.

ಈ ರಂಗೋತ್ಸವವನ್ನು ಅರೆಹೊಳೆ ಪ್ರತಿಷ್ಠಾನ, ಅಸ್ತಿತ್ವ ಮಂಗಳೂರು, ಕನ್ನಡ ವಿಭಾಗ ಹಾಗೂ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ನಿಕೇತನ ಸಹಯೋಗದಲ್ಲಿ ಆಯೋಜಿಸಲಾಗಿದೆ ಎಂದು ವಿವಿ ಪ್ರಕಟನೆ ತಿಳಿಸಿದೆ.

*Udayavani 16-07-2026*

## ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯ

# ಜು.17ರಿಂದ 19: ಮಾನ್ಸೂನ್ ರಂಗಭೂಮಿ ಉತ್ಸವ

**ಮಹಾನಗರ, ಜು.15:** ಸಂತ ಅಲೋಶಿಯಸ್ ವಿವಿಯ ರಂಗ ಅಧ್ಯಯನ ಕೇಂದ್ರವು, ಜು.17ರಿಂದ 19ರ ವರೆಗೆ 'ಮಾನ್ಸೂನ್ ರಂಗಭೂಮಿ ಉತ್ಸವ – 2026' ಅನ್ನು ಆಯೋಜಿಸುತ್ತಿದೆ. ಮೂರು ದಿನಗಳ ಉತ್ಸವದಲ್ಲಿ ಮಕ್ಕಳ ರಂಗಭೂಮಿ, ನೃತ್ಯ ರಂಗಭೂಮಿ, ಸಂಗೀತ ರಂಗಭೂಮಿ ನಿರ್ಮಾಣ ಮತ್ತು ಸಮಕಾಲೀನ ನಾಟಕ ಪ್ರದರ್ಶನಗೊಳ್ಳಲಿದೆ. ಮೂರು ದಿನಗಳ ಈ ರಂಗೋತ್ಸವದಲ್ಲಿ ಮಕ್ಕಳ ನಾಟಕ, ನೃತ್ಯ ರೂಪಕ, ಸಂಗೀತ ನಾಟಕ ಹಾಗೂ ಸಮಕಾಲೀನ ನಾಟಕಗಳು ಪ್ರದರ್ಶನಗೊಳ್ಳಲಿವೆ.

ಜು.17ರಂದು ಅರೆಹೊಳೆ ಪ್ರತಿಷ್ಠಾನದ ರಂಗಿನಾಟ ಶಿಬಿರಾರ್ಥಿಗಳಿಂದ ಮಕ್ಕಳ ನಾಟಕ 'ಮಾನವಪುರ' ಹಾಗೂ ನಂದಗೋಕುಲ ಕಲಾವಿದರಿಂದ ನೃತ್ಯ ರೂಪಕ 'ಬಾರ್ಕೂರಿನ ಹಡ್ಗ' ಪ್ರದರ್ಶನಗೊಳ್ಳಲಿದೆ. 18ರಂದು ಡಾ। ರವೀಂದ್ರ ಗುರುರಾಜ ಕಾಟೋಟಿ ಅವರ ಪರಿಕಲ್ಪನೆಯ 'ರಾಗಸಂಧಾನ' ಸಂಗೀತ ನಾಟಕ ಪ್ರದರ್ಶನವಾಗಲಿದ್ದು, ವಿದ್ವಾನ್ ಕೊಗ್ಗ ಶಂಕರನಾರಾಯಣ ಉಪಾಧ್ಯಾಯ ಅವರ ನಿರ್ದೇಶನವಿದೆ. ಈ ನಾಟಕದಲ್ಲಿ ಪ್ರಸಿದ್ಧ ಹಿಂದೂಸ್ತಾನಿ ಗಾಯಕರಾದ ಶ್ರೀ ಸಿದ್ಧಾರ್ಥ ಬೆಳ್ಮಣ್ಣು ಇವರು ಹಾಡಿ ನಟಿಸಲಿದ್ದಾರೆ.

19ರಂದು ಪುನಃ ಥಿಯೇಟರ್, ಮಣಿಪಾಲ ತಂಡವು ಉಷಾ ಕಟ್ಟೆಮನೆ ಅವರ ರಚನೆಯ 'ಅಂಗಾರ' ನಾಟಕವನ್ನು ಅಭಿನವ್ ಗ್ರೋವರ್ ಅವರ ನಿರ್ದೇಶನದಲ್ಲಿ ಪ್ರಸ್ತುತಪಡಿಸಲಿದೆ.

ಎಲ್ಲ ಕಾರ್ಯಕ್ರಮಗಳು ಎಲ್‌ಸಿಆರ್‌ಐ ಆಡಿಟೋರಿಯಂ, ಸಂತ ಅಲೋಶಿಯಸ್ (ಪರಿಗಣಿತ ವಿಶ್ವವಿದ್ಯಾಲಯ), ಮಂಗಳೂರು ಇಲ್ಲಿ ಪ್ರತಿದಿನ ಸಂಜೆ 6.30ರಿಂದ ಎಲ್ಲ ಪ್ರದರ್ಶನಗಳಿಗೆ ಉಚಿತ ಪ್ರವೇಶ ಇರಲಿದೆ. ರಂಗಾಸಕ್ತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರಂಗ ಅಧ್ಯಯನ ಕೇಂದ್ರವು ಪ್ರಕಟನೆಯಲ್ಲಿ ಕೋರಿದೆ.

*Kannadaprabha 16-07-2026*

# 17ರಿಂದ 19ರ ವರೆಗೆ ಮಾನ್ಸೂನ್ ರಂಗೋತ್ಸವ

**ಮಂಗಳೂರು:** ಸಂತ ಅಲೋಶಿಯಸ್ (ಪರಿಗಣಿತ ವಿಶ್ವವಿದ್ಯಾಲಯ) ರಂಗ ಅಧ್ಯಯನ ಕೇಂದ್ರದ ವತಿಯಿಂದ ಜು.17 ರಿಂದ 19ರ ವರೆಗೆ 'ಮಾನ್ಸೂನ್ ರಂಗೋತ್ಸವ - 2026' ಆಯೋಜಿಸಿದೆ. ಮೂರು ದಿನಗಳ ಈ ರಂಗೋತ್ಸವದಲ್ಲಿ ಮಕ್ಕಳ ನಾಟಕ, ನೃತ್ಯ ರೂಪಕ, ಸಂಗೀತ ನಾಟಕ ಹಾಗೂ ಸಮಕಾಲೀನ ನಾಟಕಗಳು ಪ್ರದರ್ಶನಗೊಳ್ಳಲಿವೆ. ಜು. 17ರಂದು ಅರೆಹೊಳೆ ಪ್ರತಿಷ್ಠಾನದ ರಂಗಿನಾಟ ಶಿಬಿರಾರ್ಥಿಗಳಿಂದ ಮಕ್ಕಳ ನಾಟಕ 'ಮಾನವಪುರ' ಹಾಗೂ ನಂದಗೋಕುಲ



ಕಲಾವಿದರಿಂದ ನೃತ್ಯ ರೂಪಕ 'ಬಾರ್ಕೂರಿನ ಹಡ್ಗ್' ಪ್ರದರ್ಶನಗೊಳ್ಳಲಿದೆ. ಜು.18ರಂದು ಡಾ.ರವೀಂದ್ರ ಗುರುರಾಜ ಕಾಟೋಟಿ ಅವರ ಪರಿಕಲ್ಪನೆಯ 'ರಾಗ ಸಂಧಾನ' ಸಂಗೀತ ನಾಟಕ ಪ್ರದರ್ಶನವಾಗಲಿದೆ. ವಿದ್ವಾನ್ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ನಿರ್ದೇಶನದ, ಈ ನಾಟಕದಲ್ಲಿ ಪ್ರಸಿದ್ಧ ಹಿಂದೂಸ್ತಾನಿ ಗಾಯಕ ಸಿದ್ಧಾರ್ಥ ಬೆಳ್ಮಣ್ಣು ಹಾಡಿ ನಟಿಸಲಿದ್ದಾರೆ. ಜು.19ರಂದು ಪುನಃ ಥಿಯೇಟರ್, ಮಣಿಪಾಲ ತಂಡ ಉಷಾ ಕಟ್ಟೆಮನೆ ಅವರ ರಚನೆಯ 'ಅಂಗಾರ' ನಾಟಕವನ್ನು ಅಭಿನವ್ ಗ್ರೋವರ್ ನಿರ್ದೇಶನದಲ್ಲಿ ಪ್ರಸ್ತುತಪಡಿಸಲಿದೆ. ಎಲ್ಲ ಕಾರ್ಯಕ್ರಮಗಳು ಎಲ್‌ಸಿಆರ್‌ಐ ಆಡಿಟೋರಿಯಂ, ಸಂತ ಅಲೋಶಿಯಸ್ (ಪರಿಗಣಿತ ವಿಶ್ವವಿದ್ಯಾಲಯ) ಮಂಗಳೂರಲ್ಲಿ ಪ್ರತಿದಿನ ಸಂಜೆ 6.30 ಗಂಟೆಗೆ ನಡೆಯಲಿದ್ದು, ಪ್ರದರ್ಶನಗಳಿಗೆ ಉಚಿತ ಪ್ರವೇಶ ಇರಲಿದೆ. ಈ ರಂಗೋತ್ಸವವನ್ನು ಅರೆಹೊಳೆ ಪ್ರತಿಷ್ಠಾನ, ಅಸ್ತಿತ್ವ ಮಂಗಳೂರು, ಕನ್ನಡ ವಿಭಾಗ ಹಾಗೂ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ನಿಕೇತನ ಸಹಯೋಗದಲ್ಲಿ ಆಯೋಜಿಸಲಾಗಿದೆ.

*Prajavani 17-07-2026*



ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಕಿಲ್ ಡೆವಲಪ್‌ಮೆಂಟ್ ಆ್ಯಂಡ್ ರಿಸರ್ಚ್ (ಐಐಎಸ್‌ಡಿಆರ್) ಹಾಗೂ ಮಂಗಳೂರಿನ ಸೇಂಟ್ ಅಲೋಶಿಯಸ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯದ ಪ್ರತಿನಿಧಿಗಳು ಒಪ್ಪಂದಪತ್ರಕ್ಕೆ ಸಹಿ ಮಾಡಿದರು

# ಐಐಎಸ್‌ಡಿಆರ್–ಸೇಂಟ್ ಅಲೋಶಿಯಸ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಯುವಜನರ ಕೌಶಲಾಭಿವೃದ್ಧಿ, ಸಂಶೋಧನೆ, ನವೋದ್ಯಮ ಹಾಗೂ ಉದ್ಯೋಗಾರ್ಹತೆ ಉತ್ತೇಜಿಸುವ ಉದ್ದೇಶದಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಕಿಲ್ ಡೆವಲಪ್‌ಮೆಂಟ್ ಆ್ಯಂಡ್ ರಿಸರ್ಚ್ (ಐಐಎಸ್‌ಡಿಆರ್) ಹಾಗೂ ಸೇಂಟ್ ಅಲೋಶಿಯಸ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ ಒಪ್ಪಂದ ಮಾಡಿಕೊಂಡಿವೆ.

ಒಪ್ಪಂದ ಪತ್ರಕ್ಕೆ ಐಐಎಸ್‌ಡಿಆರ್‌ನ ಉಪನಿರ್ದೇಶಕಿ ಅರುಂಧತಿ ಹೆಗ್ಡೆ ಹಾಗೂ ಸೇಂಟ್ ಅಲೋಶಿಯಸ್ ವಿಶ್ವವಿದ್ಯಾಲಯದ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್ ಅವರು ಜೊತೆಗೆ ಸಹಿ ಹಾಕಿದರು.

ಕೌಶಲಾಭಿವೃದ್ಧಿ, ಸಂಶೋಧನೆ, ನವೋದ್ಯಮ, ಉದ್ಯಮಶೀಲತೆ, ಸರ್ಟಿಫಿಕೇಟ್ ಕಾರ್ಯಕ್ರಮಗಳು, ಅಧ್ಯಾಪಕರ ಕೌಶಲ ಅಭಿವೃದ್ಧಿ, ಕೈಗಾರಿಕಾ ಸಹಭಾಗಿತ್ವ, ಶೈಕ್ಷಣಿಕ ಸಹಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಜಂಟಿ ಕಾರ್ಯಕ್ರಮ ಹಮ್ಮಿಕೊಳ್ಳಲು ಉಭಯ ಸಂಸ್ಥೆಗಳು ಒಪ್ಪಿಕೊಂಡಿವೆ.

ಈ ಸಂದರ್ಭದಲ್ಲಿ ಶೇಖರ್ ಪೂಜಾರಿ, ದೇವರಾಜ್ ಕೆ., ಪಿ.ಎ. ಜೋಸ್, ಶಾಮ್‌ಲಾಲ್ ಯಮಾರ್ಳ್, ಲಕ್ಷ್ಮೀಶ್ ರೈ, ಪಿ. ಸುರೇಶ್ ಹಾಗೂ ಸ್ಟೀವನ್ ಪಿಂಟೋ ಉಪಸ್ಥಿತರಿದ್ದರು. ಐಐಎಸ್‌ಡಿಆರ್‌ನ ಕಾರ್ಯನಿರ್ವಾಹಕ ನಿರ್ದೇಶಕ ರೊನಾಲ್ಡ್ ಸಿಕ್ವೇರಾ ಕಾರ್ಯಕ್ರಮದ ಸಂಯೋಜಕರಾಗಿದ್ದರು.

*Deccan Herald 17-07-2026*

## Monsoon Theatre Festival from today

MANGALURU, DHNS: The Ranga Adhyayana Kendra of St Aloysius Deemed-to-be-University will organise a three-day 'Monsoon Theatre Festival – 2026' from July 17.

'Manavapura', a children's play, will be presented by the participants of Ranginata Theatre Camp of Arehole Pratishthana, followed by the dance theatre production 'Barkurina Hadg' by Nandagokula Kalavidaru on July 17.

The musical theatre production 'Ragasandhana', conceived by Dr Ravindra Gururaj Katoti and directed by Vidwan Korgi Shankaranarayana Upadhyaya, will be staged on July 18. The production features renowned Hindustani vocalist Sri Sidhartha Belmannu, who will both sing and perform in the play. Punah Theatre, Manipal, will present the contemporary play 'Angara' written by Usha Kattemane and directed by Abhinav Grover on July 19. All plays will be staged at the LCRI Auditorium on the university campus from 6.30 pm.

*Indian Express 17-07-2026*

## Monsoon Theatre Fest at St Aloysius College

EXPRESS NEWS SERVICE
@ Mangaluru

THE Ranga Adhyayana Kendra, St Aloysius (Deemed to-be University) is organising a 3-day 'Monsoon Theatre Festival - 2026' from July 17 to 19 at the LCRI Auditorium on the campus. The three-day festival will feature children's theatre, dance theatre, a musical theatre production, and contemporary drama.

On July 17, the children's play "Manavapura" will be presented by the participants of the Ranginata Theatre Camp of Arehole Pratishthana, followed by the dance theatre production "Barkurina Hadg" by Nandagokula Kalavidaru.

On July 18, the musical theatre production "Ragasandhana" conceived by Dr Ravindra Gururaj Katoti and directed by Vidwan Korgi Shankaranarayana Upadhyaya, will be staged. The production features renowned Hindustani vocalist Sidhartha Belmannu, who will both sing and perform in the play. On July 19, Punah Theatre, Manipal, will present the contemporary play "Angara" written by Usha Kattemane and directed by Abhinav Grover.

*Udayavani 18-07-2026*

# ಜರ್ನಿ ಥೇಟರ್ ಸಂಸ್ಥೆಯಿಂದ 'ನಾಟಕದ ಓದು' ಕಾರ್ಯಕ್ರಮ



**ಮಹಾನಗರ, ಜು.17:** ಮಂಗಳೂರಿನ ಜರ್ನಿ ಥೇಟರ್ ಗ್ರೂಪ್ ಸಂಸ್ಥೆಯು ಸಂತ ಅಲೋಶಿಯಸ್ (ಪರಿಗಣಿತ) ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ರವಿವಾರ ಎಲ್.ಸಿ.ಆರ್.ಐ. ಸಭಾಂಗಣದಲ್ಲಿ 'ನಾಟಕದ ಓದು' ಕಾರ್ಯಕ್ರಮವನ್ನು ಆಯೋಜಿಸಿತ್ತು.ರಂಗಾಯಣದ ಎಸ್. ರಾಮನಾಥ್ ಅವರ 'ಅಶ್ವಪರ್ವ' ನಾಟಕವನ್ನು ಈ ಸಂದರ್ಭದಲ್ಲಿಓದಲಾಯಿತು. ಈ ಇದು ಪರಿಣಾಮಕಾರಿಯಾಗಿ ನಾಟಕವನ್ನು ಹೇಗೆ ಓದಬಹುದು ಎಂಬ ಹಿನ್ನೆಲೆಯಲ್ಲಿ ಮಾಡಿದ ಪ್ರಯೋಗವಾಗಿತ್ತು. ಪಾತ್ರ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಹಿನ್ನೆಲೆಯಲ್ಲಿ ಪೂರಕ ಸಂಗೀತ ಮತ್ತು ಹಾಡುಗಳನ್ನು ಬಳಸಲಾಗಿತ್ತು.

ಹಿರಿಯ ನಟ ಡಾ। ಆರ್. ನರಸಿಂಹ ಮೂರ್ತಿ (ಅಶ್ವತ್ಥಾಮ), ರೋಹನ್ ಉಚ್ಚಿಲ್ (ನಾರಣಪ್ಪ), ಕಿರಣ್ ಕುಮಾರ್(ಕುಂಭ), ಸುನಿಲ್ ಪಲ್ಲಮಜಲು(ಕಾಲ), ಶರಣ್ಯ ಎನ್. ಟಿ. (ಪಾರಿವಾಳ), ಶಶಾಂಕ್ ಐತಾಳ್(ದೀಪ) ನಾಟಕದ ಪಾತ್ರಗಳನ್ನು ಓದಿದರು. ಮೇಘನಾ ಕುಂದಾಪುರ ಮತ್ತು ಶಮಿತಾ ಆಚಾರ್ಯ ಹಿನ್ನೆಲೆ ಗಾಯನಮತ್ತುಸಂಗೀತವನ್ನುನಿರ್ವಹಿಸಿದರು. ಸುಧೀಶ್ ಕೊಡ್ಲು ಮತ್ತು ಶ್ರೀಶ ಕುಮಾರ್ ಬೆಳಕು, ರಾಜೇಶ್ ಧ್ವನಿ ನಿರ್ವಹಣೆ, ಕಾವ್ಯ ಹೆಬ್ರಿ ದಾಖಲೀಕರಣದಲ್ಲಿ ಸಹಕರಿಸಿದರು. ಬಳಿಕ ನಾಟಕ ಮತ್ತು ಪ್ರಯೋಗದ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು. ಭಾಗವಹಿಸಿದ್ದ ಹಿರಿ-ಕಿರಿಯ ಪ್ರೇಕ್ಷಕರು ಈ ಪ್ರಯೋಗಕ್ಕೆ ಸ್ಪಂದಿಸಿ ಅಭಿಪ್ರಾಯ ವ್ಯಕ್ತಪಡಿಸಿದರು.

*Prajavani 18-07-2026*

# ಜರ್ನಿ ಥೇಟರ್: ನಾಟಕದ ಓದು ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಜರ್ನಿ ಥೇಟರ್ ಗ್ರೂಪ್ ಸಂಸ್ಥೆಯು ಸೇಂಟ್ ಅಲೋಶಿಯಸ್ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ರಜೆಗೆ 'ನಾಟಕದ ಓದು' ಕಾರ್ಯಕ್ರಮ ಆಯೋಜಿಸಿತ್ತು.

ರಂಗಾಯಣದ ಎಸ್. ರಾಮನಾಥ್ ಅವರ 'ಅಶ್ವಪರ್ವ' ನಾಟಕವನ್ನು ಓದಲಾಯಿತು. ಪಾತ್ರ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಹಿನ್ನೆಲೆಯಲ್ಲಿ ಪೂರಕ ಸಂಗೀತ ಮತ್ತು ಹಾಡುಗಳನ್ನು ಬಳಸಲಾಗಿತ್ತು.

ನಟ ಆರ್. ನರಸಿಂಹ ಮೂರ್ತಿ (ಅಶ್ವತ್ಥಾಮ), ರೋಹನ್ ಉಚ್ಚಿಲ್ (ನಾರಣಪ್ಪ), ಕಿರಣ್ ಕುಮಾರ್ (ಕುಂಭ), ಸುನಿಲ್ ಪಲ್ಲಮಜಲು(ಕಾಲ), ಶರಣ್ಯ ಎನ್. ಟಿ. (ಪಾರಿವಾಳ), ಶಶಾಂಕ್ ಐತಾಳ್ (ದೀಪ) ನಾಟಕದ ಪಾತ್ರಗಳನ್ನು ಓದಿದರು.

ಮೇಘನಾ ಕುಂದಾಪುರ ಮತ್ತು ಶಮಿತಾ ಆಚಾರ್ಯ ಹಿನ್ನೆಲೆ ಗಾಯನ ಮತ್ತು ಸಂಗೀತವನ್ನು ನಿರ್ವಹಿಸಿದರು. ಸುದೀಶ್ ಕೊಡ್ಲು ಮತ್ತು ಶ್ರೀಶ ಕುಮಾರ್ ಬೆಳಕು, ರಾಜೇಶ್ ಧ್ವನಿ ನಿರ್ವಹಣೆ, ಕಾವ್ಯ ಹೆಬ್ರಿ ದಾಖಲೀಕರಣದಲ್ಲಿ ಸಹಕರಿಸಿದರು. ಬಳಿಕ ನಾಟಕ ಮತ್ತು ಪ್ರಯೋಗದ ಕುರಿತು ಸಂವಾದ ನಡೆಯಿತು.


ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ನಡೆದ 'ನಾಟಕದ ಓದು' ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕಲಾವಿದರು

*Vijayavani 20-07-2026*



## ನಾಟಕದ ಓದು ಕಾರ್ಯಕ್ರಮ

ಜರ್ನಿ ಥೇಟರ್ ಗ್ರೂಪ್ ವತಿಯಿಂದ ಮಂಗಳೂರು ಸಂತ ಅಲೋಶಿಯಸ್ (ಪರಿಗಣಿತ) ವಿವಿ ಸಭಾಂಗಣದಲ್ಲಿ ನಾಟಕದ ಓದು ಕಾರ್ಯಕ್ರಮ ನಡೆಯಿತು. ರಂಗಾಯಣದ ಎಸ್.ರಾಮನಾಥ್ ಅವರ ಅಶ್ವಪರ್ವ ನಾಟಕವನ್ನು ಓದಲಾಯಿತು. ನಟ ಡಾ.ಆರ್.ನರಸಿಂಹ ಮೂರ್ತಿ, ರೋಹನ್ ಉಚ್ಚಿಲ್, ಕಿರಣ್ ಕುಮಾರ್, ಸುನೀಲ್ ಪಲ್ಲಮಜಲು, ಶರಣ್ಯಾ ಎನ್.ಟಿ., ಶಶಾಂಕ್ ಐತಾಳ್ ನಾಟಕದ ಪಾತ್ರಗಳನ್ನು ಓದಿದರು. ಮೇಘನಾ ಕುಂದಾಪುರ ಮತ್ತು ಶಮಿತಾ ಆಚಾರ್ಯ ಹಿನ್ನೆಲೆ ಗಾಯನ ಮತ್ತು ಸಂಗೀತ ನಿರ್ವಹಿಸಿದರು. ಸುಧೀಶ್ ಕೂಡ್ಲು ಮತ್ತು ಶ್ರೀಶ ಕುಮಾರ್ ಬೆಳಕು, ರಾಜೇಶ್ ಧ್ವನಿ ನಿರ್ವಹಣೆ, ಕಾವ್ಯ ಹೆಬ್ರಿ ದಾಖಲೀಕರಣದಲ್ಲಿ ಸಹಕರಿಸಿದರು.

*Varthabharathi 20-07-2026*

## ಜರ್ನಿ ಥೇಟರ್ ಗ್ರೂಪ್‌ನಿಂದ 'ನಾಟಕ ಓದು' ಕಾರ್ಯಕ್ರಮ



ಮಂಗಳೂರು, ಜು.19: ಜರ್ನಿ ಥೇಟರ್ ಗ್ರೂಪ್ ಸಂಸ್ಥೆಯು ಸಂತ ಅಲೋಶಿಯಸ್ (ಪರಿಗಣಿತ) ವಿವಿಯ ಸಹಯೋಗದೊಂದಿಗೆ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಇತ್ತೀಚೆಗೆ ನಾಟಕದ ಓದು ಕಾರ್ಯಕ್ರಮ ಆಯೋಜಿಸಿತ್ತು.

ರಂಗಾಯಣದ ಎಸ್.ರಾಮನಾಥ್ ಅಶ್ವಪರ್ವ ನಾಟಕವನ್ನು ಓದಲಾಯಿತು.

ಪರಿಣಾಮಕಾರಿಯಾಗಿ ನಾಟಕವನ್ನು ಹೇಗೆ ಓದಬಹುದು ಎಂಬ ಹಿನ್ನೆಲೆಯಲ್ಲಿ ಮಾಡಿದ ಪ್ರಯೋಗವಾಗ ಇದಾಗಿತ್ತು. ಪಾತ್ರ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಹಿನ್ನೆಲೆಯಲ್ಲಿ ಪೂರಕ ಸಂಗೀತ ಮತ್ತು ಹಾಡುಗಳನ್ನು ಬಳಸಲಾಗಿತ್ತು.

ಹಿರಿಯ ನಟ ಡಾ.ಆರ್.ನರಸಿಂಹ ಮೂರ್ತಿ (ಅಶ್ವತ್ಥಾಮ), ರೋಹನ್ ಉಚ್ಚಿಲ್ (ನಾರಣಪ್ಪ), ಕಿರಣ್ ಕುಮಾರ್ (ಕುಂಭ), ಸುನೀಲ್ ಪಲ್ಲಮಜಲು (ಕಾಲ), ಶರಣ್ಯಾ ಎನ್.ಟಿ. (ಪಾರಿವಾಳ), ಶಶಾಂಕ್ ಐತಾಳ್ (ದೀಪ) ನಾಟಕದ ಪಾತ್ರಗಳನ್ನು ಓದಿದರು. ಮೇಘನಾ ಕುಂದಾಪುರ ಮತ್ತು ಶಮಿತಾ ಆಚಾರ್ಯ ಹಿನ್ನೆಲೆ ಗಾಯನ ಮತ್ತು ಸಂಗೀತವನ್ನು ನಿರ್ವಹಿಸಿದರು. ಸುಧೀಶ್ ಕೂಡ್ಲು ಮತ್ತು ಶ್ರೀಶ ಕುಮಾರ್ ಬೆಳಕು, ರಾಜೇಶ್ ಧ್ವನಿ, ಕಾವ್ಯಾ ಹೆಬ್ರಿ ದಾಖಲೀಕರಣದಲ್ಲಿ ಸಹಕರಿಸಿದರು.

ಬಳಿಕ ನಾಟಕ ಮತ್ತು ಪ್ರಯೋಗದ ಕುರಿತು ಸಂವಾದ ನಡೆಯಿತು.

*Times of India 20-07-2026*

## Natakada Odu programme held

A 'Natakada Odu' programme organised by Journey Theatre Group, Mangaluru, in association with St Aloysius (Deemed To Be University) was held recently. The play 'Ashvaparva' by S Ramanath of Rangayana was read as part of the programme, which experimented with methods of effective play reading using background music and songs aligned to characters and situations. Senior actor R Narasimha Murthy (Aswatthama), Rohan Uchil (Naranappa), Kiran Kumar (Kumbha), Sunil Pallamajalu (Kaala), Sharanya NT (Pariwala) and Shashank Aital (Deepa) read the roles. Meghana Kundapur and Shamita Acharya provided background vocals and music. Sudheesh Kudlu and Srish Kumar handled lighting, Rajesh managed sound, and Kavya Hebri was in charge of recording. A

*Times of India 19-07-2026*

## Seminar on human rights held

**Mangaluru:** A seminar on Strengthening Human Rights for support staff focusing on Employment, Health and Skill Development was organised on Friday by the Department of Postgraduate Studies and Research in Social Work, School of Arts and Humanities, St Aloysius (Deemed to be University) in collaboration with National Human Rights Commission.

Bipin Bihari Gautham, presenting officer (district judge), National Human Rights Commission, who was the chief guest, spoke about the human dignity and the rights of the employees. Seminars included sessions on occupational health, workplace dignity and other topics. TNN

*Varthabharathi 20-07-2026*

# ಅಲೋಶಿಯಸ್ ವಿವಿಯಲ್ಲಿ ಮಾನವ ಹಕ್ಕುಗಳ ಕುರಿತ ವಿಚಾರ ಸಂಕಿರಣ



ಮಂಗಳೂರು, ಜು.18: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕಲಾ ಮತ್ತು ಮಾನವಿಕ ಶಾಲೆಯ ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ಹೊಸದಿಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸಹಯೋಗದೊಂದಿಗೆ ಬೋಧಕೇತರ ಸಿಬ್ಬಂದಿಗೆ ಒಂದು ದಿನದ ವಿಚಾರ ಸಂಕಿರಣ ಶುಕ್ರವಾರ ನಡೆಯಿತು.

ಸಂತ ಅಲೋಶಿಯಸ್ ವಿವಿಯ ಎರಿಕ್ ಮಥಾಯಸ್ ಸಭಾಂಗಣದಲ್ಲಿ ಮಾನವ ಹಕ್ಕುಗಳ ಕುರಿತಂತೆ ನಡೆದ ವಿಚಾರ ಸಂಕಿರಣವನ್ನು ಹೊಸದಿಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಸ್ತುತಿ ಅಧಿಕಾರಿ (ಜಿಲ್ಲಾ ನ್ಯಾಯಾಧೀಶ) ಬಿಪಿನ್ ಬಿಹಾರಿ ಗೌತಮ್ ಉದ್ಘಾಟಿಸಿದರು.

ಬಳಿಕ ಮಾತನಾಡಿ ಅವರು, ನೌಕರರ ಮಾನವ ಘನತೆ ಮತ್ತು ಹಕ್ಕುಗಳ ಬಗ್ಗೆ ವಿವರಿಸಿದರಲ್ಲದೆ, ಎಲ್ಲಾ ಶಿಕ್ಷಣ ಸಂಸ್ಥೆಗಳು ಸಹಾಯಕ ಸಿಬ್ಬಂದಿಯ ಘನತೆಯನ್ನು ಎತ್ತಿಹಿಡಿಯಬೇಕು ಎಂದು ಹೇಳಿದರು.

ಅಲೋಶಿಯಸ್ ವಿವಿಯ ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಧ್ಯಕ್ಷತೆ ವಹಿಸಿ, ನಮ್ಮ ಸಂವಿಧಾನದ ಮೌಲ್ಯಗಳು ಮತ್ತು ನಮ್ಮ ದೇಶದ ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕುಗಳ ಬಗ್ಗೆ ವಿವರಿಸಿದರು.

ಸೆಮಿನಾರ್‌ನಲ್ಲಿ ಡಾ.ರಮೀಲಾ ಶೇಖರ್ ರವರು ಔದ್ಯೋಗಿಕ ಆರೋಗ್ಯದ ಕುರಿತು ಸೆಷನ್‌ಗಳನ್ನು ನಡೆಸಿದರು. ಡಾ.ರೋಶನ್ ಮೊಂತೇರೊ ಕೆಲಸದ ಘನತೆ ಮತ್ತು ಕೌಶಲ್ಯ ಅಭಿವೃದ್ಧಿ ಹಾಗೂ ಕಿಶೋರ್ ಅತ್ತಾವರ ನೌಕರರ ಬೆಂಬಲ ಮತ್ತು ಸರಕಾರಿ ಪ್ರಯೋಜನಗಳನ್ನು ಅರ್ಥಮಾಡಿಕೊಳ್ಳುವ ಕುರಿತು ಮಾಹಿತಿ ನೀಡಿದರು.

ಕಲಾ ಮತ್ತು ಮಾನವಿಕ ಶಾಲೆಯ ಡೀನ್ ಡಾ. ಮನೋಹರ್ ಸೆರಾವೊ, ಕಾರ್ಯಕ್ರಮದ ಸಂಚಾಲಕಿ ಡಾ.ಶ್ವೇತಾ ರಸ್ಕಿನ್ಹಾ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ಜೀವನ್ ಡಿಸೋಜ ಮತ್ತು ಧನ್ಯಾಶ್ರೀ ಕಾರ್ಯಕ್ರಮವನ್ನು ನಿರೂಪಿಸಿದರು. ವಿದ್ಯಾರ್ಥಿ ಸಂಚಾಲಕಿ ಜನ್ಸಿತಾ ವಂದಿಸಿದರು.

*Udayavani 21-07-2026*

# ಅಲೋಶಿಯಸ್: ವಿಚಾರ ಸಂಕಿರಣ



**ಮಹಾನಗರ, ಜು. 20:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾ ನಿಲಯದ ವತಿಯಿಂದ ನವದೆಹಲಿಯ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸಹಯೋಗ ದೊಂದಿಗೆ ಮಾನವ ಹಕ್ಕುಗಳನ್ನು ಬಲಪಡಿಸುವ ಕುರಿತು ವಿಚಾರ ಸಂಕಿರಣ ನಡೆಯಿತು.

ನವದೆಹಲಿಯ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಸ್ತುತಿ ಅಧಿಕಾರಿ ಬಿಪಿನ್ ಬಿಹಾರಿ ಗೌತಮ್ ವಿಚಾರ ಸಂಕಿರಣ ಉದ್ಘಾಟಿಸಿದರು.

ಸಂತ ಅಲೋಶಿಯಸ್ ವಿವಿಯ ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂವಿಧಾನದ ಮೌಲ್ಯಗಳು ಮತ್ತು ನಮ್ಮ ದೇಶದ ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕುಗಳ ಬಗ್ಗೆ ವಿವರಿಸಿದರು. ಅವರು ನ್ಯಾಯ, ಸಮಾನತೆ ಮತ್ತು ಎಲ್ಲರಿಗೂ ಗೌರವ ಮತ್ತು ಘನತೆಯ ಕೆಲಸದ ಸ್ಥಳವನ್ನು ರಚಿಸಲು ಸಂಸ್ಥೆಯಲ್ಲಿ ಒದಗಿಸಲಾದ ವ್ಯವಸ್ಥೆಗಳ ಬಗ್ಗೆ ಮಾತನಾಡಿದರು.

ಸಂಚಾಲಕಿ ಡಾ। ಶ್ವೇತಾ ರಸ್ಕಿನ್ಹಾ ಸ್ವಾಗತಿಸಿ, ಜನ್ಸಿತಾ ವಂದಿಸಿದರು. ವಿದ್ಯಾರ್ಥಿಗಳಾದ ಜೀವನ್ ಡಿ' ಸೋಜಾ ಮತ್ತು ಧನ್ಯಶ್ರೀ ನಿರೂಪಿಸಿದರು.

ಮಾನವಿಕ ಶಾಲೆಯ ಡೀನ್ ಡಾ। ಮನೋಹರ್ ಸೆರಾವೊ, ಡಾ। ರಮೀಲಾ ಶೇಖರ್, ಡಾ। ರೋಶನ್ ಮೊಂತೇರೊ, ಕಿಶೋರ್ ಅತ್ತಾವರ್ ಮತ್ತಿತರರಿದ್ದರು.

Janamithra 22-07-2026

# ಮಾನವ ಹಕ್ಕುಗಳ ವಿಚಾರ ಸಂಕಿರಣ

■ ಜನಮಿತ್ರ ವಾರ್ತೆ ಮಂಗಳೂರು



ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸಹಯೋಗದಲ್ಲಿ ಬೋಧಕೇತರ ಸಿಬ್ಬಂದಿಗಾಗಿ ಮಾನವ ಹಕ್ಕುಗಳ ಬಲವರ್ಧನೆ: ಉದ್ಯೋಗ, ಆರೋಗ್ಯ ಮತ್ತು ಕೌಶಲ್ಯಾಭಿವೃದ್ಧಿ ವಿಚಾರ ಸಂಕಿರಣ ಜುಲೈ 17 ರಂದು ವಿವಿಯ ಎರಿಕ್ ಮಥಾಯಸ್ ಸಭಾಂಗಣದಲ್ಲಿ ನಡೆಯಿತು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಸ್ತುತಿ ಅಧಿಕಾರಿ ಬಿಪಿನ್ ಬಿಹಾರಿ ಗೌತಮ್ ಕಾರ್ಯಕ್ರಮ ಉದ್ಘಾಟಿಸಿ, ಮಾನವ ಘನತೆಯಲ್ಲಿ ಯಾವುದೇ ಶ್ರೇಣೀಕೃತ ವ್ಯವಸ್ಥೆಯಿರುವುದಿಲ್ಲ ಹಾಗೂ ಸಂಸ್ಥೆಗಳು ಸಹಾಯಕ ಸಿಬ್ಬಂದಿಯ ಗೌರವವನ್ನು ಎತ್ತಿಹಿಡಿಯಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಕುಲಪತಿ ರೆ. ಡಾ. ಕರ್ನಲ್ ಪ್ರವೀಣ್ ಮಾರ್ಟಿಸ್, ಎಸ್.ಜೆ. ಅವರು ಸಂವಿಧಾನದ ಮೌಲ್ಯ ಹಾಗೂ ಮೂಲಭೂತ ಹಕ್ಕುಗಳ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಡಾ. ರಮೀಲಾ ಶೇಖರ್, ಡಾ. ರೋಶನ್ ಮೊಂತೇರೋ ಮತ್ತು ಕಿಶೋರ್ ಅತ್ತಾವರ್ ವಿವಿಧ ವಿಷಯಗಳ ಬಗ್ಗೆ ಗೋಷ್ಠಿ ನಡೆಸಿಕೊಟ್ಟರು. ವೇದಿಕೆಯಲ್ಲಿ ಡಾ. ಮನೋಹರ್ ಸೆರಾವೊ, ಡಾ. ಶ್ವೇತಾ ರಸ್ಕಿನ್ಹಾ ಹಾಗೂ ಜನ್ವಿತಾ ಉಪಸ್ಥಿತರಿದ್ದರು.

ದ್ವಿತೀಯ ಎಂ.ಎಸ್.ಡಬ್ಲ್ಯು. ವಿದ್ಯಾರ್ಥಿಗಳಾದ ಜೀವನ್ ಡಿಸೋಜಾ ಮತ್ತು ಧನ್ಯಶ್ರೀ ಕಾರ್ಯಕ್ರಮ ನಿರೂಪಿಸಿದರು.

Prajavani 23-07-2026

# 'ಎಲ್ಲೆಡೆ ಕೊಂಕಣಿ ಭಾಷೆ ಸುಗಂಧ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಪಶ್ಚಿಮ ಕರಾವಳಿಯುದ್ದಕ್ಕೂ ಕೊಂಕಣಿ ಭಾಷೆಯು ತನ್ನ ಸುಗಂಧ ಹರಡುತ್ತಿದೆ. ಕೊಂಕಣಿ 'ಸಬ್ದಾಂ ಸಂಪತ್ತಿ' ಶಬ್ದಕೋಶವು ಒಂದು ಮೈಲಿಗಲ್ಲು ಆಗುವುದರಲ್ಲಿ ಸಂಶಯವಿಲ್ಲ' ಎಂದು ಮಂಗಳೂರು ಕಥೋಲಿಕ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಪೀಟರ್ ಪಾಲ್ ಸಲ್ಡಾನ ನುಡಿದರು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ, ಫಾ. ಪ್ರಶಾಂತ್ ಮಾಡ್ತ ಸಂಪಾದಿತ 'ಸಬ್ದಾಂ ಸಂಪತ್ತಿ' ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು

ಮುಖ್ಯ ಅತಿಥಿ ಪಿ.ವಿ. ಮೋಹನ್ ಮಾತನಾಡಿ, 'ಶಬ್ದದ ಸಮಾನಾರ್ಥಕ, ವಿರುದ್ಧಾರ್ಥಕಗಳನ್ನು ರಚಿಸುವುದು ನಿಜವಾಗಿಯೂ ಸವಾಲಿನ ಕೆಲಸ. ಈ ನಿಟ್ಟಿನಲ್ಲಿ ಸಂಪಾದಕರು ಹಾಗೂ ಅಕಾಡೆಮಿಯು ಬಹಳಷ್ಟು ಶ್ರಮ ವಹಿಸಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಜೋಕಿಂ ಸ್ಟ್ಯಾನಿ ಅಲ್ವಾರಿಸ್, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಇನ್ನೂ ಹಲವು ಪುಸ್ತಕಗಳು ಮುದ್ರಣದ ಹಂತದಲ್ಲಿವೆ. ಅಕಾಡೆಮಿ ಮುದ್ರಿತ 'ಕಾವ್ಯ ಪಲ್ಲವಿ' ಮತ್ತು 'ಕಥಾ ಪಲ್ಲವಿ' ಎಂಬ ಕೊಂಕಣಿಯಿಂದ ಕನ್ನಡಕ್ಕೆ ಭಾಷಾಂತರಗೊಂಡ ಕೃತಿಗಳ ಮೂಲಕ ಕೊಂಕಣಿ ಸಾಹಿತ್ಯವನ್ನು ಕನ್ನಡ ಭಾಷೆಗೆ ಪರಿಚಯಿಸುವ ಕೆಲಸವನ್ನು ಅಕಾಡೆಮಿಯ ಮಾಡುತ್ತಿದೆ. ಕೊಂಕಣಿ ಸಾಹಿತಿಗಳನ್ನು ಹಾಗೂ ಸಾಹಿತ್ಯವನ್ನು ಇತರ ಭಾಷಿಗರಿಗೆ ಪರಿಚಯಿಸುವ ಕೆಲಸಕ್ಕೆ ಅಕಾಡೆಮಿ ಬದ್ಧವಾಗಿದೆ ಎಂದರು.

ಅಲೋಶಿಯಸ್ ವಿದ್ಯಾಸಂಸ್ಥೆಗಳ ರೆಕ್ಟರ್ ಫಾ. ಬ್ರಾಯನ್ ಪಿರೇರಾ, ಕುಲಪತಿ ಫಾ. ಪ್ರವೀಣ್ ಮಾರ್ಟಿಸ್, ತುಳು ಅಕಾಡೆಮಿಯ ಅಧ್ಯಕ್ಷ ತಾರನಾಥ ಗಟ್ಟಿ ಗೌರವ ಅತಿಥಿಗಳಾಗಿದ್ದರು.

ಅಕಾಡೆಮಿಯ ರಿಜಿಸ್ಟ್ರಾರ್ ರಾಜೇಶ್ ಜಿ. ಸ್ವಾಗತಿಸಿದರು. ಫಾ. ಪ್ರಶಾಂತ್ ಮಾಡ್ತ ಪ್ರಾಸ್ತಾವಿಕ ಮಾತನಾಡಿದರು. ರೋಶನ್ ಕ್ರಾಸ್ತಾ ಕಾರ್ಯಕ್ರಮ ನಿರೂಪಿಸಿದರು. ಫ್ಲೋರಾ ಕ್ಯಾಸ್ತಲಿನೊ ವಂದಿಸಿದರು.



*Samyuktha Karnataka 23-07-2026*

# ಕೊಂಕಣಿ ಶಬ್ದಕೋಶ ಬಿಡುಗಡೆ

**ಸಂ.ಕ.ಸಮಾಚಾರ, ಮಂಗಳೂರು**

ಅರಬ್ಬಿ ಸಮುದ್ರದ ಅಲೆಗಳಲ್ಲೇ ಕೊಂಕಣಿಯ ಗರ್ಜನೆ ಮೊಳಗುತ್ತಿದೆ. ಪಶ್ಚಿಮ ಕರಾವಳಿಯುದ್ದಕ್ಕೂ ಕೊಂಕಣಿ ಭಾಷೆಯು ತನ್ನ ಪರಿಮಳವನ್ನು ಹರಡುತ್ತಿದೆ. ಇಂತಹ ಭಾಷೆಯಲ್ಲಿ ಕೊಂಕಣಿ ಸಬ್ದಾಂ ಸಂಪತ್ತಿ ಶಬ್ದಕೋಶವು ಒಂದು ಅದ್ಭುತ ಮೈಲಿಗಲ್ಲು ಆಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಮಂಗಳೂರು ಕಥೋಲಿಕ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷರಾದ ಸ್ವಾ. ಪೀಟರ್ ಪಾವ್ಲ್ ಸಲ್ಡಾನ್ಹಾ ಹೇಳಿದರು.

ಜುಲೈ 21ರಂದು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮುದ್ರಿಸಿದ ಫಾ. ಪ್ರಶಾಂತ್ ಮಾಡ್ತ ಸಂಪಾದಿತ "ಸಬ್ದಾಂ ಸಂಪತ್ತಿ" ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು

ಅಧ್ಯಕ್ಷತೆ ವಹಿಸಿದ್ದ ಜೋಕಿಂ ಸ್ಟ್ಯಾನಿ ಅಲ್ವಾರಿಸ್ ಅಮಾತನಾಡಿ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸುತ್ತಿದ್ದು, ಇನ್ನೂ ಹಲವು ಪುಸ್ತಕಗಳು ಮುದ್ರಣದ ಹಂತದಲ್ಲಿವೆ. ಅಕಾಡೆಮಿ ಮುದ್ರಿತ, ಕಾವ್ಯ ಪಲ್ಲವಿ ಮತ್ತು ಕಥಾ ಪಲ್ಲವಿ ಎಂಬ ಕೊಂಕಣಿಯಿಂದ ಕನ್ನಡಕ್ಕೆ ಭಾಷಾಂತರಗೊಂಡ ಕೃತಿಗಳ ಮೂಲಕ ಕೊಂಕಣಿ ಸಾಹಿತ್ಯವನ್ನು ಕನ್ನಡ ಭಾಷೆಗೆ ಪರಿಚಯಿಸುವ ಕೆಲಸವನ್ನು ಅಕಾಡೆಮಿಯು ಮಾಡುತ್ತಿದೆ. ಕೊಂಕಣಿ ಸಾಹಿತಿಗಳನ್ನು ಹಾಗೂ ಸಾಹಿತ್ಯವನ್ನು ಇತರ ಭಾಷಿಗರಿಗೆ ಪರಿಚಯಿಸುವ ಕೆಲಸಕ್ಕೆ ಅಕಾಡೆಮಿಯು ಬದ್ಧವಾಗಿದೆ. ಈ ಕೆಲಸದಲ್ಲಿ ಕೊಂಕಣಿ ಸಾಹಿತಿಗಳು ಹಾಗೂ ಕವಿಗಳು ತಮ್ಮ ಸಂಪೂರ್ಣ ಬೆಂಬಲವನ್ನು ಅಕಾಡೆಮಿಗೆ ನೀಡಬೇಕೆಂದು ಕರೆ ಕೊಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪಿ.ವಿ. ಮೋಹನ್ ಅವರು ಮಾತನಾಡಿದರು. ವೇದಿಕೆಯಲ್ಲಿ ಗೌರವ ಅತಿಥಿಗಳಾಗಿ ಅಲೋಶಿಯಸ್ ವಿದ್ಯಾಸಂಸ್ಥೆಗಳ ರೆಕ್ಟರ್ ಫಾ. ಬ್ರಾಯನ್ ಪಿರೇರಾ, ಕುಲಪತಿಗಳಾದ ಫಾ. ಡಾ. ಪ್ರವೀಣ್ ಮಾರ್ಟಿಸ್, ತುಳು ಅಕಾಡೆಮಿಯ ಅಧ್ಯಕ್ಷರಾದ ತಾರನಾಥ ಗಟ್ಟಿಯವರು ಉಪಸ್ಥಿತರಿದ್ದರು. ಅಕಾಡೆಮಿಯ ರಿಜಿಸ್ಟ್ರಾರ್ ರಾಜೇಶ್ ಜಿ. ಸ್ವಾಗತಿಸಿ, ಫಾ. ಪ್ರಶಾಂತ್ ಮಾಡ್ತರವರು ಪ್ರಸ್ತಾವನೆಗೈದರು. ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮವನ್ನು ರೋಶನ್ ಕ್ರಾಸ್ತಾ ನಿರೂಪಿಸಿದರು, ಫ್ಲೋರಾ ಕ್ಯಾಸ್ತಲಿನೊ ವಂದಿಸಿದರು.



*Samyuktha Karnataka 23-07-2026*

# ಯುವಕರಲ್ಲಿ ತುಳು ಪ್ರೀತಿ ಮೂಡಿಸಿ




**ಸಂ.ಕ.ಸಮಾಚಾರ, ಮಂಗಳೂರು**

ಮುಂದಿನ ತಲೆಮಾರಿಗೆ ತುಳುವನ್ನು ದಾಟಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ತುಳು ಭಾಷೆಯ ಮೇಲೆ ಪ್ರೀತಿ ಮೂಡಿಸುವ ಹಾಗೂ ತುಳುವಿನ ಜ್ಞಾನವನ್ನು ಬಿತ್ತುವ ಕೆಲಸ ನಡೆಯಬೇಕಾಗಿದೆ ಎಂದು ಲೇಖಕಿ ಹಾಗೂ ತುಳು ಅಕಾಡೆಮಿ ಮಾಜಿ ಸದಸ್ಯೆ ರೂಪಕಲಾ ಆಳ್ವ ಹೇಳಿದರು.

ತುಳು ಸಾಹಿತ್ಯ ಅಕಾಡೆಮಿ ಹಾಗೂ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ತುಳು ವಿಭಾಗದ ಸಹಯೋಗದಲ್ಲಿ ನಡೆದ ಅಕಾಡೆಮಿಡ್ ಒಂಜಿ ದಿನ ಬಲೆ ತುಳು ಓದುಗ ಸರಣಿಯ 15ನೇ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಮರೋಳಿ ಸೂರ್ಯನಾರಾಯಣ ದೇವಸ್ಥಾನದ ಟ್ರಸ್ಟಿ ವೇಣಿ ಮರೋಳಿ ಮಾತನಾಡಿ, ತಾವು 30 ವರ್ಷಗಳ ಕಾಲ ಗಲ್ಫ್ ದೇಶದಲ್ಲಿ ಇದ್ದಂತ ಸಂದರ್ಭದಲ್ಲಿ ಸಕ್ರೀಯವಾಗಿ ತುಳು ಕಾರ್ಯಕ್ರಮವನ್ನು ನಡೆಸಿದ ಬಗ್ಗೆ ನೆನಪಿಸಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಮಾತನಾಡಿ, ಓದುವ ಸಲುವಾಗಿ ನಡೆಯುವ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಂಭ್ರಮದಿಂದ ಭಾಗವಹಿಸುತ್ತಾರೆ ಹಾಗೂ ಆಸಕ್ತಿಯಿಂದ ಓದುತ್ತಾರೆ ಎಂದರು. ಸಂತ ಅಲೋಶಿಯಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಪ್ರಶಾಂತಿ ಶೆಟ್ಟಿ ಇರುವೈಲು ಶುಭ ಕೋರಿ ಮಾತನಾಡಿದರು.

ವಿದ್ಯಾರ್ಥಿ ಸಂಚಾಲಕರಾದ ದಕ್ಷಿತ್ ಕೋಟ್ಯಾನ್, ಪ್ರಸ್ತುತಿ ಶೆಟ್ಟಿ ಉಪಸ್ಥಿತರಿದ್ದರು. ಸಂಜೆಯ ಸಮಾರೋಪದಲ್ಲಿ ವಿದ್ಯಾರ್ಥಿಗಳು ತಾವು ಓದಿದ ಪುಸ್ತಕದ ಬಗ್ಗೆ ವಿಚಾರ ವಿನಿಮಯ ನಡೆಸಿದರು. ತುಳು ಅಕಾಡೆಮಿ ಸದಸ್ಯ ಸಂಚಾಲಕ ಬೂಬ ಪೂಜಾರಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

*Prajavani 23-07-2026*




ಮಂಗಳೂರಿನಲ್ಲಿ ನಡೆದ 'ಅಕಾಡೆಮಿಡ್ ಒಂಜಿ ದಿನ ಬಲೆ ತುಳು ಓದುಗ' ಸರಣಿಯ 15ನೇ ಕಾರ್ಯಕ್ರಮದಲ್ಲಿ ಲೇಖಕಿ ರೂಪಕಲಾ ಆಳ್ವ ಮಾತನಾಡಿದರು

# ಯುವ ಜನತೆಗೆ ತುಳು ಪ್ರೀತಿ ಮೂಡಿಸಿ: ರೂಪಕಲಾ ಆಳ್ವ

ಪ್ರಜಾವಾಣಿ ವಾರ್ತೆ

ಮಂಗಳೂರು: 'ತುಳು ಭಾಷೆಯ ಸೊಗಡನ್ನು ಮುಂದಿನ ತಲೆಮಾರಿಗೆ ದಾಟಿಸಬೇಕಾದರೆ ವಿದ್ಯಾರ್ಥಿಗಳಿಗೆ ತುಳು ಭಾಷೆಯ ಮೇಲೆ ಪ್ರೀತಿ ಮೂಡಿಸುವ ಹಾಗೂ ಅವರಲ್ಲಿ ತುಳುವಿನ ಜ್ಞಾನವನ್ನು ಬಿತ್ತುವ ಕೆಲಸ ನಡೆಯಬೇಕು' ಎಂದು ಲೇಖಕಿ ಹಾಗೂ ತುಳು ಅಕಾಡೆಮಿ ಮಾಜಿ ಸದಸ್ಯೆ ರೂಪಕಲಾ ಆಳ್ವ ಹೇಳಿದರು.

ತುಳು ಸಾಹಿತ್ಯ ಅಕಾಡೆಮಿ ಹಾಗೂ ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ತುಳು ವಿಭಾಗದ ಸಹಯೋಗದಲ್ಲಿ ನಡೆದ 'ಅಕಾಡೆಮಿಡ್ ಒಂಜಿ ದಿನ 'ಬಲೆ ತುಳು ಓದುಗ' ಸರಣಿಯ 15ನೇ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮರೋಳಿ ಸೂರ್ಯನಾರಾಯಣ ದೇವಸ್ಥಾನದ ಟ್ರಸ್ಟಿ ವೇಣಿ ಮರೋಳಿ, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಸಂತ ಅಲೋಶಿಯಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಪ್ರಶಾಂತಿ ಶೆಟ್ಟಿ ಇರುವೈಲು ಮಾತನಾಡಿದರು.

ವಿದ್ಯಾರ್ಥಿ ಸಂಚಾಲಕರಾದ ದಕ್ಷಿತ್ ಕೋಟ್ಯಾನ್, ಪ್ರಸ್ತುತಿ ಶೆಟ್ಟಿ ಉಪಸ್ಥಿತ-ರಿದ್ದರು. ಸಂಜೆಯ ಸಮಾರೋಪದಲ್ಲಿ ವಿದ್ಯಾರ್ಥಿಗಳು ತಾವು ಓದಿದ ಪುಸ್ತಕದ ಬಗ್ಗೆ ವಿಚಾರ ವಿನಿಮಯ ನಡೆಸಿದರು. ತುಳು ಅಕಾಡೆಮಿ ಸದಸ್ಯ ಸಂಚಾಲಕ ಬೂಬ ಪೂಜಾರಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

*Vijayavani 23-07-2026*

# ವಿದ್ಯಾರ್ಥಿ ನಾಯಕತ್ವ ಮಹತ್ವದ ಜವಾಬ್ದಾರಿ



ವಿದ್ಯಾರ್ಥಿ ಪರಿಷತ್‌ನ ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾರ್ಥಿ ಪರಿಷತ್‌ನ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು. ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ಫಾ.ಬ್ರಾಯನ್ ಪಿರೇರಾ, ಕುಲಪತಿ ಫಾ.ಪ್ರವೀಣ್ ಮಾರ್ಟಿಸ್ ಮೊದಲಾದವರು ಉಪಸ್ಥಿತರಿದ್ದರು.

**ಮಂಗಳೂರು:** ನಾಯಕತ್ವವು ಒಂದು ಸ್ಥಾನವಲ್ಲ, ಅದು ಒಂದು ಮಹತ್ವದ ಜವಾಬ್ದಾರಿ. ವಿದ್ಯಾರ್ಥಿ ಸಂಘ ನೀಡುವ ಅವಕಾಶದಿಂದ ಸಮರ್ಥ ನಾಯಕರಾಗಲು ಪ್ರಯತ್ನಿಸಬೇಕು ಎಂದು ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ಬ್ರಾಯನ್ ಪಿರೇರಾ ಹೇಳಿದರು.

■ **ಬ್ರಾಯನ್ ಪಿರೇರಾ ಅಭಿಪ್ರಾಯ**

ನಗರದ ಸಂತ ಅಲೋಶಿಯಸ್ ಸ್ವಾಯತ್ತ ಕಾಲೇಜಿನ ವಿದ್ಯಾರ್ಥಿ ಪರಿಷತ್ ಉದ್ಘಾಟನಾ ಸಮಾರಂಭ ಕಾಲೇಜಿನ ಎಲ್.ಎಫ್. ಸಭಾಂಗಣದಲ್ಲಿ ನಡೆಯಿತು.

ಸ್ಲೋವಾಕಿಯಾದ ಟ್ರಿನಾವಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಮಿಲೋಸ್ ಲಿಚ್ನರ್ ಮುಖ್ಯ ಅತಿಥಿಯಾಗಿದ್ದರು. ಸಂತ ಅಲೋಶಿಯಸ್ ಪರಿಗಣಿತ ವಿವಿ ಕುಲಪತಿ ಫಾ.ಪ್ರವೀಣ್ ಮಾರ್ಟಿಸ್, ಕುಲಸಚಿವ ಡಾ.ರೊನಾಲ್ಡ್ ನಜರೆತ್, ವಿದ್ಯಾರ್ಥಿ ಪರಿಷತ್ ನಿರ್ದೇಶಕ ಡಾ.ಅನೂಪ್ ಡೆನ್ಸಿಲ್ ವೇಗಸ್, ಸಹಾಯಕ ನಿರ್ದೇಶಕಿ ಬಿನ್ನಿ ಚಾನ್ ಶುಭಹಾರೈಸಿದರು.

ವಿದ್ಯಾರ್ಥಿಪರಿಷತ್ ಅಧ್ಯಕ್ಷ ಜಿಸೆಲ್‌ಪರ್ಲ್ ವಾಸ್, ಉಪಾಧ್ಯಕ್ಷ ಜೀವನ್ ಡಿಮೆಲ್ಲೊ, ಕಾರ್ಯದರ್ಶಿಗಳಾದ ಸತ್ಯಪ್ರಸಾದ್ ಜಿ.ಪೈ., ರೇಚಲ್ ಮರಿಯಾ ಪಾಯ್ಸ್, ಜಂಟಿ ಕಾರ್ಯದರ್ಶಿಗಳಾದ ವಿವೇಕಾ ಎಂ.ಎಸ್., ಡಿಮೆಲೊ ಇ.ಗ್ರಾಂಜೊ, ವಿವಿಧ ಸಂಘಗಳ ಕಾರ್ಯದರ್ಶಿಗಳಾದ ಸಿಮೊನ್ ಡಿಸೋಜ, ಪಿಯೂಷ್ ಶೆಣೈ, ಗ್ರೇಶನ್ ರೋವಿನ್ ಫರ್ನಾಂಡಿಸ್, ಅಜಯ್ ಪಾರ್ಟಿ ದೀಪಕ್, ರಿಯೊನ್ ವಿವಿಯನ್ ವೇಗಸ್, ಝುಲಿಫಾ ನಾಸಿರ್ ಪ್ರಮಾಣ ವಚನ ಸ್ವೀಕರಿಸಿದರು. ವಿದ್ಯಾರ್ಥಿ ಪರಿಷತ್‌ನ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು. ವಿವಿಧ ಬ್ಲಾಕ್‌ಗಳ ಡೀನ್‌ಗಳಾದ ಡಾ.ಮನೋಹರ್ ಸೆರಾವೊ, ಡಾ.ಅರುಣ ಕಲ್ಕೂರ್, ಡಾ.ಆಶಾ ಅಬ್ರಹಾಂ, ಡಾ.ಮಮತಾ, ಕ್ಲಾರೆಟ್ ವಿನಯಾ ಪೆರೇರಾ, ಡಾ.ಲವೀನಾ ಲೋಬೊ, ಡಾ.ರೆನಿಟಾ ಮರಿಯಾ ಡಿಸೋಜ, ಡಾ.ರೂಬನ್ ಎಸ್., ಡಾ.ಸುಚೇತ ವಿಜಯಕುಮಾರ್, ಡಾ.ರೇಚಲ್ ನತಾಶಾ ಮೇರಿ, ಡಾ.ಮೆಲಿಸಾ ಗೋವಿಯಸ್, ಶಾರೊಲಿನ್ ಮಿನೇಜಸ್, ಡಾ.ಡೆಲ್ನಾ ಡಿ ಲೋಬೊ, ಡಾ.ಸ್ನೇಹಾ ಬಾಲರಾಜ್ ಉಪಸ್ಥಿತರಿದ್ದರು. ಬಿನ್ನಿ ಚಾನ್ ಮುಖ್ಯ ಅತಿಥಿಯನ್ನು ಪರಿಚಯಿಸಿದರು. ವಿದ್ಯಾರ್ಥಿನಿ ವೆರಿನಾ ನಿರೂಪಿಸಿದರು.

*Udayavani 24-07-2026*

## ಆಲೋಶಿಯಸ್ ಕಾಲೇಜು: ವಿದ್ಯಾರ್ಥಿ ಪರಿಷತ್ ಉದ್ಘಾಟನೆ

# ನಾಯಕತ್ವಕ್ಕೆ ವೇದಿಕೆ: ವಂ| ಡಾ| ಪ್ರವೀಣ್ ಮಾರ್ಟಿಸ್

**ಮಹಾನಗರ, ಜು. 23:** ಮಂಗಳೂರಿನ ಸಂತ ಅಲೋಶಿಯಸ್ ಸ್ವಾಯತ್ತ ಕಾಲೇಜಿನ 2026-27ನೇ ಸಾಲಿನ ವಿದ್ಯಾರ್ಥಿಗಳ ಪರಿಷತ್ ಉದ್ಘಾಟನ ಸಮಾರಂಭ ಕಾಲೇಜು ಸಭಾಂಗಣದಲ್ಲಿ ನೆರವೇರಿತು.




ಸ್ಲೋವಾಕಿಯಾದ ಟ್ರಿನಾವಾ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ| ಮಿಲೊಸ್ ಲಿಚ್ನರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ನಾಯಕತ್ವದಲ್ಲಿ ಆವಶ್ಯಕವಾಗಿ ಇರಲೇಬೇಕಾದ ಐದು ತತ್ವಗಳ ಬಗ್ಗೆ ತಿಳಿಸಿದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ವಂ| ಡಾ| ಪ್ರವೀಣ್ ಮಾರ್ಟಿಸ್ ಮಾತನಾಡಿ, ನಾಯಕತ್ವವು ನಿಮ್ಮಲ್ಲಿರುವ ವಿಶೇಷ ಗುಣವಾಗಿದೆ. ಉತ್ತಮ ನಾಯಕರೆಂದು ಸಾಬೀತುಪಡಿಸಲು ಇದೊಂದು ಉತ್ತಮ ಅವಕಾಶ. ವಿದ್ಯಾರ್ಥಿ ಪರಿಷತ್ ಸದಸ್ಯರು ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಬೇಕು ಎಂದು ಅವರು ಸಲಹೆ ನೀಡಿದರು.

ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ವಂ| ಬ್ರಾಯನ್ ಪಿರೇರಾ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾಯಕತ್ವವು ಒಂದು ಸ್ಥಾನವಲ್ಲ, ಅದು ಒಂದು ಉತ್ಸಾಹ. ನೀವು ಎಲ್ಲಿಂದ ಬಂದಿದ್ದೀರಿ ಎಂಬುದರ ಬಗ್ಗೆ ಹೆಮ್ಮೆ ಪಡಬೇಕು ಮತ್ತು ಸಬಲೀಕರಣದ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಕೌನ್ಸಿಲ್‌ನಲ್ಲಿರುವ ಕೇವಲ ಒಂದು ಅವಕಾಶ ಮಾತ್ರವಲ್ಲ, ಅದು ಒಂದು ಜವಾಬ್ದಾರಿಯಾಗಿದೆ ಎಂದರು. ವಿವಿಯ ಕುಲಸಚಿವ ಡಾ| ರೊನಾಲ್ಡ್ ನಜರೆತ್, ವಿದ್ಯಾರ್ಥಿ ಪರಿಷತ್ ನಿರ್ದೇಶಕ ಡಾ| ಅನೂಪ್ ಡೆನ್ಝಿಲ್ ವೇಗಸ್ ಮತ್ತು ಸಹಾಯಕ ನಿರ್ದೇಶಕಿ ಬಿನ್ನಿ ಬಾನ್, ಡೀನ್‌ಗಳಾದ ಡಾ| ಮನೋಹರ್ ಸೆರಾವೊ, ಡಾ| ಅರುಣ ಕಲ್ಲೂರ್, ಡಾ| ಆಶಾ ಅಬ್ರಹಾಂ, ಡಾ| ಮಮತಾ, ಕ್ಲಾರೆಟ್ ವಿನಯಾ ಪಿರೇರಾ, ಡಾ| ಲವೀನಾ ಲೋಬೊ, ಡಾ| ರೆನಿಟಾ ಮರಿಯಾ ಡಿ'ಸೋಜಾ, ಡಾ| ರೂಬನ್ ಎಸ್., ಡಾ| ಸುಚೇತ ವಿಜಯಕುಮಾರ್, ಡಾ| ರೇಚಲ್ ನತಾಶಾ ಮೇರಿ, ಡಾ| ಮೆಲಿಸಾ ಗೋವಿಯಸ್, ಶಾರೊಲಿನ್ ಮಿನೇಜಸ್, ಡಾ| ಡೆಲ್ವಾ ಡಿ ಲೋಬೊ, ಡಾ| ಸ್ನೇಹಾ ಬಾಲರಾಜ್ ಮತ್ತಿತರರು ಇದ್ದರು. ಡಾ| ಅನುಪ್ ಡೆಂಜಿಲ್ ವೇಗಸ್ ಸ್ವಾಗತಿಸಿದರು. ವಿದ್ಯಾರ್ಥಿ ಪರಿಷತ್ತಿನ ಉಪಾಧ್ಯಕ್ಷ ಜೀವನ್ ಡಿಮೆಲ್ಲೊ ವಂದಿಸಿದರು. ವಿದ್ಯಾರ್ಥಿನಿ ವೆರಿನಾ ನಿರೂಪಿಸಿದರು.

*Prajavani 24-07-2026*

## ಭದ್ರತಾ ಸನ್ನದ್ಧತೆಯನ್ನು ಪರೀಕ್ಷಿಸಲು ಎನ್‌ಎಸ್‌ಜಿ ಅಣಕು ಕಾರ್ಯಾಚರಣೆ

# ನಗರದ ಚಾಪೆಲ್‌ನಲ್ಲಿ 'ಉಗ್ರರ ಬಂಧನ'!

ಪ್ರಜಾವಾಣಿ ವಾರ್ತೆ

**ಮಂಗಳೂರು:** 'ನಗರದಲ್ಲಿ ಉಗ್ರರು ಅಡಗಿದ್ದಾರೆ' ಎಂಬ ಮಾಹಿತಿ ಪಡೆದ ರಾಷ್ಟ್ರೀಯ ಭದ್ರತಾ ದಳದ (ಎನ್‌ಎಸ್‌ಜಿ) ಕಮಾಂಡೊ ಪಡೆ ಹೆಲಿಕಾಪ್ಟರ್‌ನಲ್ಲಿ ನಗರಕ್ಕೆ ಬಂದಿಳಿಯಿತು. ಬಾವುಟಗುಡ್ಡೆ ಪ್ರದೇಶದಲ್ಲಿ ತೀವ್ರ ಶೋಧ ಕಾರ್ಯ ನಡೆಸಿ ಸೇಂಟ್ ಅಲೋಶಿಯಸ್ ಚಾಪೆಲ್‌ನಲ್ಲಿ ಅಡಗಿದ್ದ ಉಗ್ರರನ್ನು ಗುರುವಾರ ಇಳಿ ಹೊತ್ತಿನಲ್ಲಿ ಸೆರೆಹಿಡಿಯಿತು!

ಈ ಪ್ರದೇಶದ ಭದ್ರತಾ ಸನ್ನದ್ಧತೆಯನ್ನು ಪರೀಕ್ಷಿಸುವ ಉದ್ದೇಶದಿಂದ ಎನ್‌ಎಸ್‌ಜಿ ನಡೆಸಿದ ಈ ಭಯೋತ್ಪಾದನಾ ನಿಗ್ರಹದ ಅಣಕು ಕಾರ್ಯಾಚರಣೆ ಸ್ಥಳದಲ್ಲಿದ್ದವರ ಕುತೂಹಲಕ್ಕೆ ಕಾರಣವಾಯಿತು.

ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಪ್ರಾಂಗಣದ ಸಮೀಪದ ಬಹುಮಹಡಿ ಕಟ್ಟಡದ ಮೇಲೆ ಹೆಲಿಕಾಪ್ಟರ್ ಸಂಜೆ 5 ಗಂಟೆ ವೇಳೆ ಬಂದಿಳಿಯಿತು. ಹೆಲಿಕಾಪ್ಟರ್‌ನಲ್ಲಿದ್ದ ಸುಮಾರು 10- 15 ಕಮಾಂಡೊಗಳು ಕಟ್ಟಡದಿಂದ ಸರ ಸರನೇ ಇಳಿದು, ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಪ್ರಾಂಗಣದ ಒಳಹೊಕ್ಕರು.



ಮಂಗಳೂರಿನ ಬಾವುಟಗುಡ್ಡೆಯ ಕಟ್ಟಡವೊಂದರ ಮೇಲೆ ಹೆಲಿಕಾಪ್ಟರ್ ಅನ್ನು ಇಳಿಸಲಾಯಿತು

### ಕುತೂಹಲ ಮೂಡಿಸಿದ ಹೆಲಿಕಾಪ್ಟರ್

ನಗರದಲ್ಲಿ ಬೆಳಿಗ್ಗೆ 10 ಗಂಟೆ ಸುಮಾರಿಗೆ ಹೆಲಿಕಾಪ್ಟರ್ ಕೆಲ ಹೊತ್ತು ಹಾರಾಟ ನಡೆಸಿತ್ತು. ತೀರಾ ಕೆಳ ಹಂತದಲ್ಲಿ ಸುತ್ತು ಹಾಕುತ್ತಿದ್ದ ಹೆಲಿಕಾಪ್ಟರ್ ನಗರದ ನಿವಾಸಿಗಳಲ್ಲಿ ಗೊಂದಲ ಹುಟ್ಟು ಹಾಕಿತ್ತು. ಇದರ ಭಾರಿ ಸದ್ದು ಕೇಳಿ ಮನೆಯಿಂದ ಹೊರ ಬಂದ ನಗರದ ನಿವಾಸಿಗಳು ಟೆರೇಸ್ ಹತ್ತಿ ದೃಶ್ಯವನ್ನು ವೀಕ್ಷಿಸಿದರು. ಹೆಲಿಕಾಪ್ಟರ್ ಹಾರಾಟದ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಅನೇಕರು ನಗರದಲ್ಲಿ ಏನಾಗುತ್ತಿದೆ ಎಂದು ಪರಸ್ಪರ ವಿಚಾರಿಸುತ್ತಿದ್ದುದು ಕಂಡು ಬಂತು.

ಸುತ್ತ ಮುತ್ತಲ ಪರಿಸರದಲ್ಲಿ ಶೋಧ ಕಾರ್ಯ ನಡೆಸಿದರು. ವಿಶ್ವವಿದ್ಯಾಲಯದ ಆಡಳಿತ ಬ್ಲಾಕ್‌ನ ಕಟ್ಟಡದ ಒಂದೊಂದೇ ಕೊಠಡಿಗಳಲ್ಲಿ ಹುಡುಕಾಟ ನಡೆಸುತ್ತಾ, ಸೇಂಟ್ ಅಲೋಶಿಯಸ್ ಚಾಪೆಲ್‌ನ ಕಡೆಗೆ ಧಾವಿಸಿದರು. ಸ್ಥಳದಲ್ಲಿದ್ದವರಿಗೆ ಏನಾಗುತ್ತಿದೆ ಎಂದೇ ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಚಾಪೆಲ್ ಒಳಗಿನಿಂದ ಮುಸುಕುಧಾರಿ ಉಗ್ರರನ್ನು ಬಂಧಿಸಿ ಕರೆತಂದರು.

ಸುಮಾರು ಎರಡೂವರೆ ಗಂಟೆ ನಡೆದ ಈ ಕಾರ್ಯಾಚರಣೆಯನ್ನು ಸ್ಥಳದಲ್ಲಿದ್ದವರು ಮೂಕವಿಸ್ಮಿತರಾಗಿ ವೀಕ್ಷಿಸಿದರು. ಅಲ್ಲಿ ಸೇರಿದ್ದವರು ಈ ಕಾರ್ಯಾಚರಣೆ ಬಗ್ಗೆ ಮನಬಂದಂತೆ ವಿಶ್ಲೇಷಿಸಿ, ಮಾಹಿತಿ ಹಂಚಿಕೊಂಡರು. ಉಗ್ರರ ವೇಷದಲ್ಲಿದ್ದವರ ಬಂಧನವಾಗಿ ಈ ಕಾರ್ಯಾಚರಣೆ ಸಂಪನ್ನಗೊಂಡ ಬಳಿಕವಷ್ಟೇ ಇದೊಂದು ಅಣಕು ಕಾರ್ಯಾಚರಣೆ ಎಂಬುದು ಸ್ಥಳೀಯರಿಗೆ ಗೊತ್ತಾಯಿತು.

ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿರುವ ಎನ್‌ಎಸ್‌ಜಿ ತಂಡವು ಇದೇ 25ರ ವರೆಗೆ ವಿವಿಧ ಪ್ರದೇಶಗಳಲ್ಲಿ ಭಯೋತ್ಪಾದನಾ ನಿಗ್ರಹದ ಅಣಕು ಕಾರ್ಯಾಚರಣೆಯನ್ನು ನಡೆಸಲಿದೆ. ಸುರತ್ಕಲ್ ಎನ್‌ಐಟಿಕೆ ಪ್ರಾಂಗಣದಲ್ಲಿಯೂ ಎನ್‌ಎಸ್‌ಜಿ ಅಣಕು ಕಾರ್ಯಾಚರಣೆಯನ್ನು ನಡೆಸಿತು.

*Hosadigantha 24-07-2026*

# ಕಡಲತಡಿ ಬ್ಲ್ಯಾಕ್ ಕ್ಯಾಟ್ಸ್ ಸಮರಾಭ್ಯಾಸ!









ಮಂಗಳೂರು: ರಾಷ್ಟ್ರೀಯ ಭದ್ರತಾ ದಳ (ಎನ್‌ಎಸ್‌ಜಿ) ತಂಡವು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಭಯೋತ್ಪಾದನಾ ನಿಗ್ರಹ ಅಣಕು ಕಾರ್ಯಾಚರಣೆ ನಡೆಸುತ್ತಿದ್ದು, ಇದರ ಭಾಗವಾಗಿ ಮಂಗಳೂರಿನ ವಿವಿಧ ಕಡೆ ಗುರುವಾರ ಬೆಳಗ್ಗೆ ಹೆಲಿಕಾಪ್ಟರ್ ಹಾರಾಟ ನಡೆಯಿತು.

ಈ ಅಣಕು ಕಾರ್ಯಾಚರಣೆಯ ಮಾಹಿತಿ ಇಲ್ಲದ ಬಹುತೇಕ ನಾಗರಿಕರು, ಇದೇನಿದು ಹೆಲಿಕಾಪ್ಟರ್ ಹಾರಾಟ ಎಂದು ಬೆರಗಾದರು. ಬಳಿಕ ಅಣಕು ಕಾರ್ಯಾಚರಣೆಯ ವಿಷಯ ತಿಳಿಯುತ್ತಿದ್ದಂತೆ ನಿಟ್ಟುಸಿರು ಬಿಟ್ಟರು.

ನಗರದ ವಿವಿಧ ಭಾಗಗಳಲ್ಲಿ ಗುರುವಾರ ಬೆಳಗ್ಗೆ ಆಕಾಶದಲ್ಲಿ ಕೆಳಮಟ್ಟದಲ್ಲಿ ಹೆಲಿಕಾಪ್ಟರ್ ಹಾರಾಟವಾಗಿದ್ದನ್ನು ಕಂಡ ನಾಗರಿಕರು ಗಾಬರಿಗೊಂಡಿದ್ದರು. ಹೆಲಿಕಾಪ್ಟರ್ ಹಾರಾಟದ ವಿಡಿಯೋ ಎಲ್ಲೆಡೆ ವೈರಲ್ ಆಗಿ ಇದೇನು ಇಷ್ಟು ಕೆಳಮಟ್ಟದಲ್ಲಿ ಹೆಲಿಕಾಪ್ಟರ್ ಹಾರಾಟವಾಗುತ್ತಿದೆ ಎಂದು ಪ್ರಶ್ನಿಸುತ್ತಿದ್ದುದು ಕಂಡುಬಂತು.

ಎನ್‌ಎಸ್‌ಜಿಯ ಕಾರ್ಯದಕ್ಷತೆ ಕುರಿತಂತೆ ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿರುವ ಅಣಕು ಕಾರ್ಯಾಚರಣೆಯ ಭಾಗವಾಗಿ ಈ ಹೆಲಿಕಾಪ್ಟರ್ ಹಾರಾಟ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದು, ನಾಗರಿಕರು ಗಾಬರಿ ಪಡುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ.





**ಭದ್ರತಾ ಸನ್ನದ್ಧತೆಯ ಪರೀಕ್ಷೆ:**

ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯನ್ನು ಕೇವಲ ಭದ್ರತಾ ಸನ್ನದ್ಧತೆಯನ್ನು ಪರೀಕ್ಷಿಸುವ ಉದ್ದೇಶದಿಂದ ನಡೆಸಲಾಗುತ್ತಿದ್ದು, ಕಾರ್ಯಾಚರಣೆಯ ಅವಧಿಯಲ್ಲಿ ನಾಗರಿಕರು ಸಂಚಾರ ನಿಯಂತ್ರಣ ನೀಡುವಂತೆ ಭದ್ರತಾ ಸಿಬ್ಬಂದಿಯ ಸೂಚನೆಗಳನ್ನು ಪಾಲಿಸಿ ಅಗತ್ಯ ಸಹಕಾರ ನೀಡುವಂತೆ ಹಾಗೂ ಯಾವುದೇ ವದಂತಿಗಳಿಗೆ ಕಿವಿಗೊಡದೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

- ಆಕಾಶದಲ್ಲಿ ಕೆಳಮಟ್ಟದಲ್ಲಿ ಹೆಲಿಕಾಪ್ಟರ್ ಹಾರಾಟವಾಗಿದ್ದನ್ನು ಕಂಡ ನಾಗರಿಕರು ಗಾಬರಿಗೊಂಡಿದ್ದರು.
- ಎನ್‌ಎಸ್‌ಜಿಯ ಕಾರ್ಯದಕ್ಷತೆ ಕುರಿತಂತೆ ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿರುವ ಅಣಕು ಕಾರ್ಯಾಚರಣೆಯ ಭಾಗವಾಗಿ ಈ ಹೆಲಿಕಾಪ್ಟರ್ ಹಾರಾಟ ನಡೆಸಲಾಗಿದೆ

**ಎನ್‌ಎಸ್‌ಜಿ ಕಾರ್ಯವೈಖರಿ**

ದೇಶದ ಆಂತರಿಕ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಭದ್ರತಾ ದಳ ಕಠಿಣ ಕಾರ್ಯಾಚರಣೆಗಳನ್ನು ಮತ್ತಷ್ಟು ಬಲಗೊಳಿಸುತ್ತಿದೆ. ಭಯೋತ್ಪಾದನೆ, ಒತ್ತೆಯಾಳುಗಳ ರಕ್ಷಣೆ, ವಿಮಾನ ಅಪಹರಣ, ಸ್ಫೋಟಕ ವಸ್ತುಗಳ ನಿಷ್ಕ್ರಿಯಗೊಳಿಸುವಿಕೆ ಹಾಗೂ ಅತ್ಯಂತ ಅಪಾಯಕಾರಿ ಭದ್ರತಾ ಕಾರ್ಯಾಚರಣೆಗಳಲ್ಲಿ ಎನ್‌ಎಸ್‌ಜಿ ವಿಶೇಷ ಪಾತ್ರ ವಹಿಸುತ್ತಿದೆ.

ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ಎನ್‌ಎಸ್‌ಜಿ, ದೇಶದ ವಿವಿಧ ಭಾಗಗಳಲ್ಲಿ ಸಂಭವಿಸಬಹುದಾದ ತುರ್ತು ಭದ್ರತಾ ಸವಾಲುಗಳಿಗೆ ಕ್ಷಿಪ್ರವಾಗಿ ಸ್ಪಂದಿಸುವ ಸಾಮರ್ಥ್ಯವನ್ನು ಹೊಂದಿದೆ. ಕಮಾಂಡೋಗಳಿಗೆ ಆಧುನಿಕ ಶಸ್ತ್ರಾಸ್ತ್ರಗಳು, ತಾಂತ್ರಿಕ ಉಪಕರಣಗಳು ಹಾಗೂ ಅತ್ಯುನ್ನತ ಮಟ್ಟದ ತರಬೇತಿ ನೀಡಲಾಗುತ್ತಿದೆ.

ರಾಜ್ಯ ಪೊಲೀಸ್, ಸಶಸ್ತ್ರ ಪಡೆಗಳು ಹಾಗೂ ಇತರ ಕೇಂದ್ರ ಭದ್ರತಾ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಎನ್‌ಎಸ್‌ಜಿ ಅಗತ್ಯವಿದ್ದಾಗ ಕಾರ್ಯಾಚರಣೆಗೆ ಇಳಿಯುತ್ತದೆ. ಪ್ರಮುಖ ರಾಷ್ಟ್ರೀಯ ಕಾರ್ಯಕ್ರಮಗಳು, ಅತಿ ಸೂಕ್ಷ್ಮ ಪ್ರದೇಶಗಳು ಹಾಗೂ ವಿವಿಧ ಭದ್ರತೆಗಳ ಅಗತ್ಯವಿರುವ ಸಂದರ್ಭಗಳಲ್ಲಿ ಎನ್‌ಎಸ್‌ಜಿಯನ್ನು ಬಳಸಿಕೊಳ್ಳಲಾಗುತ್ತದೆ.

*The Hindu 24-07-2026*

## Prepared to protect



National Security Guard (NSG) commandos conduct a mock operation simulating a terrorist attack at St. Aloysius Chapel in Mangaluru on Thursday. The drill was carried out in coordination with the Mangaluru City police, fire and emergency services, and other disaster response agencies. H.S. MANJUNATH

*Indian Express 24-07-2026*

# NSG conducts counter-terrorist mock drill in Mangaluru

EXPRESS NEWS SERVICE
@ Mangaluru

THE National Security Guard (NSG) conducted a counter terrorist mock drill across Mangaluru on Thursday. The exercise is being carried out to evaluate the preparedness and coordination of the security agencies to tackle any possible terror attacks. On Thursday evening, NSG commandos were dropped off on a building opposite St Aloysius College from a helicopter at Bavutagudda and the commandos rushed towards St Aloysius Chapel and evacuated the hostages, eliminating terrorists. NSG commandos later conducted a drill at Infosys campus near Mudipu. The mock drill will be held till July 25 across Mangaluru.



NSG commandos during mock drill at St Aloysius Chapel in Mangaluru

*Times of India 24-07-2026*

Ravi Posavanike



**PREPARING FOR WORST:** An NSG commando rappels onto a high-rise building in Mangaluru, as part of ongoing counter-terrorism mock drill

# NSG counter-terrorism exercise held in city

**Mangaluru:** A counter-terrorism exercise by the National Security Guard (NSG) was held at the St Aloysius (deemed to be university) in the city on Thursday.

The drill was part of the counter-terrorism exercise scheduled to be held at various locations in the city from July 22 to 25.

According to a release from the deputy commissioner's office, the counter-terrorism exercise is being conducted to test security preparednes.

The public are requested to follow the instructions of security personnel, including traffic regulations, extend necessary cooperation, and not pay heed to any rumours, the release stated.

As a part of the drill, the commandos surveyed the institution, and conducted the mock drill in search of terrorists inside the buildings. TNN

*Udayavani 24-07-2026*

# ಎನ್‌ಎಸ್‌ಜಿ: ಭಯೋತ್ಪಾದನ ವಿರೋಧಿ ಅಣಕು ಕಾರ್ಯಾಚರಣೆ

ಮಂಗಳೂರು, ಜು. 23: ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ) ಕಮಾಂಡೋಗಳು ಮಂಗಳೂರಿಗೆ ಆಗಮಿಸಿದ್ದು, ಭಯೋತ್ಪಾದನ ವಿರೋಧಿ ಅಣಕು ಕಾರ್ಯಾಚರಣೆ ಆರಂಭಿಸಿದ್ದಾರೆ.

ಭಯೋತ್ಪಾದನ ದಾಳಿ ಸಂಭವಿಸಿದರೆ ಅದನ್ನು ಹೇಗೆ ಎದುರಿಸಬೇಕು ಎಂಬ ಸನ್ನದ್ಧತೆಯನ್ನು ಅಣಕು ಕಾರ್ಯಾಚರಣೆ ಮಾಡುವ ಉದ್ದೇಶದಿಂದ ಎನ್‌ಎಸ್‌ಜಿಯವರು ಆಗಮಿಸಿದ್ದಾರೆ. ಬುಧವಾರ ಎಂಆರ್‌ಪಿಎಲ್ ಸ್ಥಾವರದ ಆವರಣದಲ್ಲಿ ಕಾರ್ಯಾಚರಣೆ ನಡೆಸಿದ್ದರು.

ಗುರುವಾರ ಬೆಳಗ್ಗೆ ಸುರತ್ಕಲ್‌ನ ಎನ್‌ಐಟಿಕೆ ಆವರಣದಲ್ಲಿ, ಸಂಜೆ ವೇಳೆ ಸಂತ ಅಲೋಶಿಯಸ್ ಕಾಲೇಜು ಆವರಣದಲ್ಲಿ ಕಾರ್ಯಾಚರಣೆ ನಡೆಸಿದರು. ಕಾಲೇಜು ಬಳಿಯ ಬಹುಮಹಡಿ ಕಟ್ಟಡವೊಂದರಲ್ಲಿ ರುವ ಹೆಲಿಪ್ಯಾಡ್‌ನಲ್ಲಿ ಎನ್‌ಎಸ್‌ಜಿ ಕಮಾಂಡೋಸ್ ರೋಪ್ ಮೂಲಕ ಇಳಿದು, ಬಳಿಕ ಸಂತ ಅಲೋಶಿಯಸ್ ಕಾಲೇಜು ಕಟ್ಟಡದ ಒಳಗೆ ಹಾಗೂ ಆವರಣದಲ್ಲಿ ಸಂಜೆ 5 ಗಂಟೆಯಿಂದ ರಾತ್ರಿವರೆಗೂ ಕಾರ್ಯಾಚರಣೆ ನಡೆಸಿದರು. ರಾತ್ರಿ ಕಾಲೇಜು ಆವರಣವನ್ನು ಸಂಪೂರ್ಣವಾಗಿ ಕತ್ತಲು ಮಾಡಲಾಗಿತ್ತು.

**ಸಾರ್ವಜನಿಕರಲ್ಲಿ ಕುತೂಹಲ**

ಬೆಳಗ್ಗೆ ನಗರದ ಬಂದರು, ಸುರತ್ಕಲ್, ಕೊಡಿಯಾಲಬೈಲು ಸಹಿತ ನಗರದ ವಿವಿಧ ಭಾಗಗಳಲ್ಲಿ ಕಡಿಮೆ ಎತ್ತರದಲ್ಲಿ ಹೆಲಿಕಾಪ್ಟರ್ ಹಾರಾಟ ನಡೆಸಿತು. ಅಲೋಶಿಯಸ್ ಕಾಲೇಜು ಬಳಿ ಪೂರ್ವಾಭ್ಯಾಸವನ್ನೂ ನಡೆಸಿದರು. ಇದು ಸಾರ್ವಜನಿಕರಲ್ಲಿ ಕುತೂಹಲಕ್ಕೆ ಕಾರಣವಾಯಿತು. ಕೆಲವರು ಗಾಬರಿಗೂ ಒಳಗಾದರು. ಎನ್‌ಎಸ್‌ಜಿ ಕಾರ್ಯಾಚರಣೆ ಬಗ್ಗೆ ಜಿಲ್ಲಾಡಳಿತ ಮೊದಲೇ ಪ್ರಕಟನೆ ನೀಡಿತ್ತು.

ನಗರದ ಪೊಲೀಸ್ ಇಲಾಖೆಯೂ



ಕಾರ್ಯಾಚರಣೆಗೆ ಸಹಕಾರ ನೀಡಿದೆ.

ನಗರ ಪ್ರದೇಶದಲ್ಲಿ ಸಂಭವಿಸಬಹುದಾದ ಭಯೋತ್ಪಾದಕ ಬೆದರಿಕೆಗಳಿಗೆ ಪೊಲೀಸ್ ಇಲಾಖೆ, ಅಗ್ನಿಶಾಮಕದಳ, ನಗರ ಶಸಸ್ತ್ರ ಮೀಸಲು ಪಡೆ, ಜಿಲ್ಲಾಡಳಿತ ತ್ವರಿತವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ, ವಿವಿಧ ಭದ್ರತ ಸಂಸ್ಥೆಗಳ ನಡುವಿನ ಸಮನ್ವಯ ಹಾಗೂ ತುರ್ತು ಕಾರ್ಯಾಚರಣೆಗಳ ಸನ್ನದ್ಧತೆಯನ್ನು ಮೌಲ್ಯಮಾಪನ ಈ ಕಾರ‍್ಯಾಚರಣೆ ಮೂಲಕ ಮಾಡಲಾಗುತ್ತಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ಸುಮಾರು 100 ಮಂದಿ ಅಧಿಕಾರಿ, ಸಿಬಂದಿ ಅಣಕು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ. ಜು. 25ರ ವರೆಗೆ ವಿವಿಧೆಡೆ ಈ ಕಾರ್ಯಾಚರಣೆ ನಡೆಯಲಿದೆ.

ಚೆನ್ನೈನಿಂದ ಈ ಕಾರ್ಯಾಚರಣೆಗಾಗಿ ಎನ್‌ಎಸ್‌ಜಿ ತಂಡವೇ ಆಗಮಿಸಿದ್ದು, ಮಂಗಳೂರು ಹಳೆ ವಿಮಾನ ನಿಲ್ದಾಣದಲ್ಲಿ ಬೀಡುಬಿಟ್ಟಿದೆ. ಮೂರು ದಿನಗಳ ಕಾರ್ಯಾಚರಣೆ ಬಳಿಕ ತೆರಳಲಿರುವುದಾಗಿ ತಿಳಿದುಬಂದಿದೆ.

*Kannadaprabha 24-07-2026*

# ಕಟ್ಟಡಗಳ ಮೇಲೆ ಹಾರಾಡಿದ ಕಾಪ್ಟರ್!

## ಮಂಗಳೂರಲ್ಲಿ ಭಯೋತ್ಪಾದನಾ ವಿರೋಧಿ ಎನ್‌ಎಸ್‌ಜಿ ಅಣಕು ಕಾರ್ಯಾಚರಣೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರಿನ ಬಹುಮಹಡಿ ಹಾಗೂ ಎತ್ತರದ ಕಟ್ಟಡಗಳ ಮೇಲೆ ಏಕಾಏಕಿ ಹಾರಾಟ ನಡೆಸಿದ ಸೇನಾ ಹೆಲಿಕಾಪ್ಟರ್, ಅದರಿಂದ ಕಟ್ಟಡಗಳ ಮೇಲೆ ಇಳಿದ ಕಮಾಂಡೋಗಳು.. ಇದನ್ನು ನೋಡಿ ಬೆಚ್ಚಿಬಿದ್ದ ಸ್ಥಳೀಯ ಜನತೆ... !!

ಇದು ಗುರುವಾರ ಮಂಗಳೂರು ನಗರದಾದ್ಯಂತ ಕಂಡುಬಂದ ಸೇನಾ ಹೆಲಿಕಾಪ್ಟರ್ ದಿಢೀರ್ ಕಾರ್ಯಾಚರಣೆಯ ನೋಟ. ಭಯೋತ್ಪಾದನಾ ದಾಳಿ ಸಂಭವಿಸಿದರೆ ಅದನ್ನು ಹೇಗೆ ಎದುರಿಸಬೇಕು ಎಂಬ ಸನ್ನದ್ಧತೆಯನ್ನು ಪರಿಶೀಲಿಸುವ ಉದ್ದೇಶದಿಂದ ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ) ಹೆಲಿಕಾಪ್ಟರ್‌ಮಂಗಳೂರು ನಗರದ ಹಲವು ಬಹುಮಹಡಿ ಕಟ್ಟಡಗಳ ಮೇಲೆ ಪರೀಕ್ಷಾರ್ಥ ಹಾರಾಟ ನಡೆಸಿತು.

ಮಂಗಳೂರು ನಗರದ ವಿವಿಧ ಭಾಗಗಳಲ್ಲಿ ಹೆಲಿಕಾಪ್ಟರ್ ಕಡಿಮೆ ಎತ್ತರದಲ್ಲಿ ಸಂಚರಿಸುವ ಮೂಲಕ ನಾಗರಿಕರ ಗಮನಸೆಳೆಯಿತು. ಎನ್‌ಎಸ್‌ಜಿ ಅಣಕು ಕಾರ್ಯಾಚರಣೆಯ ಮಾಹಿತಿ ಇಲ್ಲದ ಮಂದಿ ಆತಂಕಪಟ್ಟರು. ನಗರದ ಬಹುಮಹಡಿ ಕಟ್ಟಡಗಳ ಮೇಲೂ ಹೆಲಿಕಾಪ್ಟರ್ ಹಾರಾಟ ನಡೆಸಿದ್ದು, ಆದರಿಂದ ಕಮಾಂಡೋಗಳು ಇಳಿಯುವ ದೃಶ್ಯ ಕಂಡು ಸ್ಥಳೀಯರು ಬೆಚ್ಚಿಬಿದ್ದ ಪ್ರಸಂಗವೂ ನಡೆಯಿತು. ಉಗ್ರರ ದಾಳಿ ಸಂಭವಿಸಿದರೆ ಯಾವ ರೀತಿ ಕಾರ್ಯಾಚರಣೆ ನಡೆಸಬೇಕು ಎಂಬುದರ ಪ್ರಾತ್ಯಕ್ಷಿಕೆ ಇದಾಗಿದೆ. ಮುಂಬೈ ಮಾದರಿಯಲ್ಲೇ ಉಗ್ರ ಕೃತ್ಯ ಎದುರಿಸುವ ಅಣಕು ಕಾರ್ಯಾಚರಣೆ ನಡೆಸಲಾಯಿತು. ಆದ್ದರಿಂದ ನಾಗರಿಕರು ಆತಂಕಪಡುವ ಅಗತ್ಯವಿಲ್ಲ, ಇದು ರಾಷ್ಟ್ರೀಯ ಭದ್ರತಾ ಪಡೆ ನಡೆಸುವ ಭಯೋತ್ಪಾದನಾ ವಿರೋಧಿ ಅಣಕು ಕಾರ್ಯಾಚರಣೆಯ ಭಾಗವಾಗಿದೆ ಎಂದು ಮೂಲಗಳು ತಿಳಿಸಿವೆ.


ಮಂಗಳೂರಿನಲ್ಲಿ ಎತ್ತರದ ಕಟ್ಟಡದ ಮೇಲೆ ಹಾರಾಟ ನಡೆಸುತ್ತಿರುವ ಎನ್‌ಎಸ್‌ಜಿಗೆ ಸೇರಿದ ಹೆಲಿಕಾಪ್ಟರ್.

■ ಮಂಗಳೂರಿನ ಬಹುಮಹಡಿ ಹಾಗೂ ಎತ್ತರದ ಕಟ್ಟಡಗಳ ಮೇಲೆ ಏಕಾಏಕಿ ಹಾರಾಟ ನಡೆಸಿದ ಸೇನಾ ಹೆಲಿಕಾಪ್ಟರ್, ಅದರಿಂದ ಕಟ್ಟಡಗಳ ಮೇಲೆ ಇಳಿದ ಕಮಾಂಡೋಗಳು.. ಇದನ್ನು ನೋಡಿ ಬೆಚ್ಚಿಬಿದ್ದ ಸ್ಥಳೀಯ ಜನತೆ... !! ಇದು ಗುರುವಾರ ಮಂಗಳೂರು ನಗರದಾದ್ಯಂತ ಕಂಡುಬಂದ ಸೇನಾ ಹೆಲಿಕಾಪ್ಟರ್ ದಿಢೀರ್ ಕಾರ್ಯಾಚರಣೆಯ ನೋಟ.

ಗುರುವಾರ ಸಂಜೆ ಪೂರ್ಣ ಪ್ರಮಾಣದ ಭಯೋತ್ಪಾದನಾ ವಿರೋಧಿ ಅಣಕು ಕವಾಯತಿಗೆ ಮುನ್ನ ಈ ಹೆಲಿಕಾಪ್ಟರ್ ಸಂಚಾರವನ್ನು ಪರೀಕ್ಷಾರ್ಥ ಪೂರ್ವಾಭ್ಯಾಸವಾಗಿ ನಗರದಲ್ಲಿ ನಡೆಸಲಾಗಿದೆ. ಎನ್‌ಎಸ್‌ಜಿ ರೆಡ್ ಫೋರ್ಸ್ ಅಣಕು ದಾಳಿ ನಡೆಸಿದರೆ, ಎನ್‌ಎಸ್‌ಜಿ ಬ್ಲೂ ಫೋರ್ಸ್ ಅಣಕು ರಕ್ಷಣಾ ಕಾರ್ಯಾಚರಣೆ ನಡೆಸಿದೆ.

ಈ ಕಾರ್ಯಾಚರಣೆಯ ಮೂಲಕ ನಗರ ಪ್ರದೇಶದಲ್ಲಿ ಸಂಭವಿಸಬಹುದಾದ ಭಯೋತ್ಪಾದಕ ಬೆದರಿಕೆಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ, ವಿವಿಧ ಭದ್ರತಾ ಸಂಸ್ಥೆಗಳ ನಡುವಿನ ಸಮನ್ವಯ ಹಾಗೂ ತುರ್ತು ಕಾರ್ಯಾಚರಣೆಗಳ ಸನ್ನದ್ಧತೆಯನ್ನು ಮೌಲ್ಯಮಾಪನ ಮಾಡಲಾಗುತ್ತಿದೆ. ಎನ್‌ಎಸ್‌ಜಿ ಸೇರಿದಂತೆ ವಿವಿಧ ಭದ್ರತಾ ಸಂಸ್ಥೆಗಳು ಈ ಅಣಕು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದು, ಸಾರ್ವಜನಿಕರು ಆತಂಕಕ್ಕೆ ಒಳಗಾಗದೆ ಅಧಿಕಾರಿಗಳೊಂದಿಗೆ ಸಹಕರಿಸುವಂತೆ ಮನವಿ ಮಾಡಲಾಗಿದೆ.

*Vijayavani 24-07-2026*

# ಮಂಗಳೂರಿನಲ್ಲಿ ಹೆಲಿಕಾಪ್ಟರ್ ಗಸ್ತು!

## ಎನ್‌ಎಸ್‌ಜಿ ಕಲ್ಪಿತ ಕಾರ್ಯಾಚರಣೆ | ತಾಂತ್ರಿಕ ಸಿದ್ಧತೆ ಪರಿಶೀಲನೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ನಗರದ ವಿವಿಧ ಭಾಗಗಳಲ್ಲಿ ಕಡಿಮೆ ಎತ್ತರದಲ್ಲಿ ಹೆಲಿಕಾಪ್ಟರ್ ಸಂಚರಿಸಿದ ದೃಶ್ಯ ಗುರುವಾರ ಸಾರ್ವಜನಿಕರ ಗಮನ ಸೆಳೆಯಿತು. ನಗರದ ಹಲವು ಪ್ರದೇಶಗಳಲ್ಲಿ ಹೆಲಿಕಾಪ್ಟರ್ ಸುತ್ತಾಡುತ್ತಿರುವುದನ್ನು ಕಂಡ ಕೆಲವರು ಆತಂಕ ವ್ಯಕ್ತಪಡಿಸಿದರೂ, ಜಿಲ್ಲಾಡಳಿತ ಮತ್ತು ಭದ್ರತಾ ಅಧಿಕಾರಿಗಳು ಯಾವುದೇ ಭಯಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

■ ತುರ್ತು ಪರಿಸ್ಥಿತಿ ನಿಭಾಯಿಸಲು ಪೂರ್ವಾಭ್ಯಾಸ

■ ಎನ್‌ಐಟಿಕೆ ಆವರಣದಲ್ಲಿ ಕವಾಯತು

ಈ ಹೆಲಿಕಾಪ್ಟರ್ ಹಾರಾಟ ರಾಷ್ಟ್ರೀಯ ಭದ್ರತಾ ಪಡೆ(ಎನ್‌ಎಸ್‌ಜಿ) ನಡೆಸುತ್ತಿರುವ ಭಯೋತ್ಪಾದನಾ ವಿರೋಧಿ ಕಲ್ಪಿತ ಕಾರ್ಯಾಚರಣೆ ಭಾಗವಾಗಿದೆ. ನಗರ ಪ್ರದೇಶದಲ್ಲಿ ಭಯೋತ್ಪಾದನಾ ದಾಳಿ ಅಥವಾ ಇತರ ತುರ್ತು ಭದ್ರತಾ ಪರಿಸ್ಥಿತಿ ಎದುರಾದರೆ ಅದನ್ನು ಪರಿಣಾಮಕಾರಿಯಾಗಿ ಹೇಗೆ ನಿಭಾಯಿಸಬೇಕು ಎಂಬುದನ್ನು ಪರೀಕ್ಷಿಸುವ ಉದ್ದೇಶದಿಂದ ಈ ಪೂರ್ವಾಭ್ಯಾಸ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಪೂರ್ವಾಭ್ಯಾಸ:** ಸಾಯಂಕಾಲ ಪೂರ್ಣ ಪ್ರಮಾಣದ ಕಲ್ಪಿತ ಕವಾಯತಿಗೆ ಮುನ್ನ, ಎನ್‌ಎಸ್‌ಜಿ ಹೆಲಿಕಾಪ್ಟರ್ ನಗರದ ವಿವಿಧ ಬಹುಮಹಡಿ ಕಟ್ಟಡಗಳ ಸುತ್ತ ಕಡಿಮೆ ಎತ್ತರದಲ್ಲಿ ಪರೀಕ್ಷಾರ್ಥ ಹಾರಾಟ ನಡೆಸಿತು. ಈ ವೇಳೆ ಕಟ್ಟಡಗಳ ಮೇಲ್ಭಾಗದಲ್ಲಿ ಇಳಿಯುವ ಸಾಧ್ಯತೆ, ಸಿಬ್ಬಂದಿಯನ್ನು ತ್ವರಿತವಾಗಿ ಸ್ಥಳಕ್ಕೆ ತಲುಪಿಸುವ ವಿಧಾನ ಹಾಗೂ ತುರ್ತು ಕಾರ್ಯಾಚರಣೆಗೆ ಅಗತ್ಯವಿರುವ ತಾಂತ್ರಿಕ ಸಿದ್ಧತೆ ಪರಿಶೀಲಿಸಲಾಯಿತು.

**ಕಾರ್ಯಾಚರಣೆ ಉದ್ದೇಶ:** ಭಯೋತ್ಪಾದನಾ ದಾಳಿ ಸಂಭವಿಸಿದರೆ ಭದ್ರತಾ ಪಡೆಗಳ ತ್ವರಿತ ಪ್ರತಿಕ್ರಿಯೆ ಸಾಮರ್ಥ್ಯ ಪರೀಕ್ಷಿಸುವುದು, ಎನ್‌ಎಸ್‌ಜಿ, ಸ್ಥಳೀಯ ಪೊಲೀಸ್, ಅಗ್ನಿಶಾಮಕ ದಳ, ಆರೋಗ್ಯ ಇಲಾಖೆ ಹಾಗೂ ಇತರ ತುರ್ತು ಸೇವೆಗಳ ನಡುವಿನ ಸಮನ್ವಯವನ್ನು ಮೌಲ್ಯಮಾಪನ ಮಾಡುವುದು, ನಗರ ಪ್ರದೇಶದಲ್ಲಿ ರಕ್ಷಣಾ ಮತ್ತು ಸ್ಥಳಾಂತರ ಕಾರ್ಯಾಚರಣೆಗಳನ್ನು ಪರಿಣಾಮಕಾರಿಯಾಗಿ ನಡೆಸುವ ಸಿದ್ಧತೆ ಪರಿಶೀಲಿಸುವುದು, ಹೆಲಿಕಾಪ್ಟರ್ ಮೂಲಕ ವಿಶೇಷ ಪಡೆಯ ನಿಯೋಜನೆ ಹಾಗೂ ರಕ್ಷಣಾ ಕಾರ್ಯಾಚರಣೆಯ ಕಾರ್ಯಕ್ಷಮತೆಯನ್ನು ಪರೀಕ್ಷಿಸುವುದು ಕಲ್ಪಿತ ಕಾರ್ಯಾಚರಣೆ ಉದ್ದೇಶ.




ಮಂಗಳೂರು ನಗರದಲ್ಲಿ ಎನ್‌ಎಸ್‌ಜಿ ಹೆಲಿಕಾಪ್ಟರ್ ಬಹುಮಹಡಿ ಕಟ್ಟಡಗಳ ಸುತ್ತ ಕಡಿಮೆ ಎತ್ತರದಲ್ಲಿ ಪರೀಕ್ಷಾರ್ಥ ಹಾರಾಟ ನಡೆಸಿತು. ಅಧಿಕಾರಿಗಳು ಪರಿಶೀಲನೆ ನಡೆಸಿದರು.

### ಸಾರ್ವಜನಿಕರು ಸಹಕರಿಸಲು ಮನವಿ

ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡಬಾರದು ಹಾಗೂ ಆತಂಕಕ್ಕೆ ಒಳಗಾಗಬಾರದು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ. ಕಲ್ಪಿತ ಕಾರ್ಯಾಚರಣೆ ನಡೆಯುವ ವೇಳೆ ಕೆಲವು ಪ್ರದೇಶಗಳಲ್ಲಿ ಭದ್ರತಾ ಸಿಬ್ಬಂದಿಯ ಹೆಚ್ಚುವರಿ ನಿಯೋಜನೆ, ವಾಹನ ಸಂಚಾರದಲ್ಲಿ ತಾತ್ಕಾಲಿಕ ಬದಲಾವಣೆ ಅಥವಾ ಹೆಲಿಕಾಪ್ಟರ್ ಹಾರಾಟ ಕಾಣಿಸಬಹುದು. ಇವು ಪೂರ್ವ ನಿಯೋಜಿತ ಅಭ್ಯಾಸದ ಭಾಗವಾಗಿದ್ದು, ಸಾರ್ವಜನಿಕರು ಭದ್ರತಾ ಸಿಬ್ಬಂದಿಯೊಂದಿಗೆ ಸಹಕರಿಸುವಂತೆ ವಿನಂತಿಸಲಾಗಿದೆ.

### ಭದ್ರತಾ ವ್ಯವಸ್ಥೆಗೆ ಮತ್ತಷ್ಟು ಬಲ

ಇತ್ತೀಚಿನ ದಿನಗಳಲ್ಲಿ ದೇಶದ ಪ್ರಮುಖ ನಗರಗಳಲ್ಲಿ ಭದ್ರತಾ ಸನ್ನದ್ಧತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಇಂತಹ ಕಲ್ಪಿತ ಕಾರ್ಯಾಚರಣೆಗಳನ್ನು ನಿಯಮಿತವಾಗಿ ನಡೆಸಲಾಗುತ್ತಿದೆ. ಮಂಗಳೂರಿನಂತಹ ಪ್ರಮುಖ ಕರಾವಳಿ ನಗರದಲ್ಲಿ ನಡೆಯುತ್ತಿರುವ ಈ ಅಭ್ಯಾಸವು ವಿವಿಧ ಭದ್ರತಾ ಸಂಸ್ಥೆಗಳ ಸಮನ್ವಯವನ್ನು ಬಲಪಡಿಸುವ ಜತೆಗೆ, ಯಾವುದೇ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಅಗತ್ಯ ಸಿದ್ಧತೆ ಪರಿಶೀಲಿಸುವ ಮಹತ್ವದ ಹೆಜ್ಜೆ.

### 100ರಷ್ಟು ಅಧಿಕಾರಿ, ಸಿಬ್ಬಂದಿ

ಎನ್‌ಎಸ್‌ಜಿ ಭಾರತ ಸರ್ಕಾರದ ವಿಶೇಷ ಭಯೋತ್ಪಾದನೆ ನಿಗ್ರಹ ಮತ್ತು ರಕ್ಷಣಾ ಪಡೆ. ಇವರನ್ನು ಸಾಮಾನ್ಯವಾಗಿ ಬ್ಲಾಕ್ ಕ್ಯಾಟ್ ಕಮಾಂಡೋಸ್ ಎಂದು ಕರೆಯಲಾಗುತ್ತದೆ. ನವದೆಹಲಿಯಿಂದ ಕಾರವಾರ ಸೇನಾ ನೆಲೆಗೆ ಸುಮಾರು 100ರಷ್ಟು ಅಧಿಕಾರಿ ಮತ್ತು ಸಿಬ್ಬಂದಿ ತಂಡ ಆಗಮಿಸಿದೆ. ಅಲ್ಲಿಂದ ಬಂದ ಕಮಾಂಡೋಗಳ ತಂಡ ಬುಧವಾರ ಎಂಆರ್‌ಪಿಎಲ್ ಸ್ಥಾವರ, ಗುರುವಾರ ಎನ್‌ಐಟಿಕೆ ಆವರಣ ಹಾಗೂ ಸಂಜೆ ಅಲೋಶಿಯಸ್ ಕಾಲೇಜು ಆವರಣದಲ್ಲಿ ಕಲ್ಪಿತ ಕಾರ್ಯಾಚರಣೆ ನಡೆಸಿತು. ಮಾಹಿತಿ ಸಂಗ್ರಹ, ಯೋಜನೆ, ತಂಡ ನಿಯೋಜನೆ, ರಕ್ಷಣಾ ಕಾರ್ಯಾಚರಣೆ ಹಾಗೂ ನಂತರದ ಕ್ರಮ ಹೀಗೆ ವಿವಿಧ ಹಂತಗಳಲ್ಲಿ ಎನ್‌ಎಸ್‌ಜಿ ಕಾರ್ಯಾಚರಣೆ ನಡೆಸಲಾಗುತ್ತದೆ. ಜರ್ಮನ್ ಹೆಕ್ಲರ್ ಆ್ಯಂಡ್ ಕೋಚ್ ಎಂಪಿ5 ಸಬ್ ಮಷಿನ್‌ಗನ್‌ಗಳು, ಕೋಚ್ ಪಿಎಸ್‌ಜಿ1 ಸ್ನೈಪರ್ ರೈಫಲ್‌ಗಳು, ಆಸ್ಟ್ರಿಯನ್ ಗ್ಲಾಕ್- 17 ಪಿಸ್ತೂಲ್‌ಗಳು ಹಾಗೂ ಸ್ವಿಸ್ ಎಸ್‌ಐಜಿ ಎಸ್‌ಜಿ 551 ಅಸಾಲ್ಟ್ ರೈಫಲ್ ಹೊಂದಿರುತ್ತಾರೆ.

*Vijayavani 27-07-2026*

# ಕೊಂಕಣಿ ಶಬ್ದಕೋಶ ಅದ್ಭುತ ಮೈಲಿಗಲ್ಲು

■ ಬಿಷಪ್ ಪೀಟರ್ ಪಾವ್ಲ್ ಸಲ್ಡಾನಾ ಅಭಿಪ್ರಾಯ

ಮಂಗಳೂರು: ಪಶ್ಚಿಮ ಕರಾವಳಿಯುದ್ದಕ್ಕೂ ಕೊಂಕಣಿ ಭಾಷೆಯು ತನ್ನ ಪರಿಮಳವನ್ನು ಹರಡುತ್ತಿದೆ. ಇಂತಹ ಭಾಷೆಯಲ್ಲಿ ಕೊಂಕಣಿ ಸಬ್ದಾಂ ಸಂಪತ್ತಿ ಶಬ್ದಕೋಶ ಒಂದು ಅದ್ಭುತ ಮೈಲಿಗಲ್ಲು ಆಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಮಂಗಳೂರು ಬಿಷಪ್ ಡಾ.ಪೀಟರ್ ಪಾವ್ಲ್ ಸಲ್ಡಾನಾ ಹೇಳಿದರು. ಕೊಂಕಣಿ ಸಾಹಿತ್ಯ ಅಕಾಡೆಮಿ ಮುದ್ರಿಸಿದ ಪ್ರಶಾಂತ್ ಮಾಡ್ತ ಸಂಪಾದಿತ ಸಬ್ದಾಂ ಸಂಪತ್ತಿ ಶಬ್ದಕೋಶ ಬಿಡುಗಡೆಗೊಳಿಸಿ ಮಾತನಾಡಿದರು. ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್ ಅಧ್ಯಕ್ಷತೆ ವಹಿಸಿ, ಕೊಂಕಣಿ ಸಾಹಿತ್ಯ ಅಕಾಡೆಮಿ ಭಾಷೆ, ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸುತ್ತಿದ್ದು, ಇನ್ನೂ ಹಲವು ಪುಸ್ತಕಗಳು ಮುದ್ರಣದ ಹಂತದಲ್ಲಿವೆ. ಕೊಂಕಣಿ ಸಾಹಿತಿಗಳನ್ನು ಹಾಗೂ ಸಾಹಿತ್ಯವನ್ನು ಇತರ ಭಾಷಿಗರಿಗೆ ಪರಿಚಯಿಸುವ ಕೆಲಸಕ್ಕೆ ಅಕಾಡೆಮಿ ಬದ್ಧವಾಗಿದೆ ಎಂದರು. ಎಂಎಲ್‌ಸಿ ಪಿ.ವಿ.ಮೋಹನ್, ಅಲೋಶಿಯಸ್ ವಿದ್ಯಾಸಂಸ್ಥೆಗಳ ರೆಕ್ಟರ್ ಬ್ರಾಯನ್ ಪಿರೇರಾ, ಅಲೋಶಿಯಸ್ ವಿವಿ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ ಗಟ್ಟಿ ಕಾಪಿಕಾಡ್ ಉಪಸ್ಥಿತರಿದ್ದರು. ಅಕಾಡೆಮಿ ರಿಜಿಸ್ಟಾರ್ ರಾಜೇಶ್ ಜಿ. ಸ್ವಾಗತಿಸಿದರು. ಫ್ಲೋರಾ ಕ್ಯಾಸ್ತಲಿನೊ ವಂದಿಸಿದರು. ರೋಶನ್ ಕ್ರಾಸ್ತಾ ಕಾರ್ಯಕ್ರಮ ನಿರೂಪಿಸಿದರು.



ಬಿಷಪ್ ಡಾ.ಪೀಟರ್ ಪಾವ್ಲ್ ಸಲ್ಡಾನಾ ಪುಸ್ತಕ ಬಿಡುಗಡೆಗೊಳಿಸಿದರು. ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್, ಎಂಎಲ್‌ಸಿ ಪಿ.ವಿ.ಮೋಹನ್, ಡಾ.ಪ್ರವೀಣ್ ಮಾರ್ಟಿಸ್, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ ಗಟ್ಟಿ ಕಾಪಿಕಾಡ್, ರಾಜೇಶ್ ಜಿ. ಮೊದಲಾದವರು ಉಪಸ್ಥಿತರಿದ್ದರು.

*The Hindu 27-07-2026*

# INTACH launches commemorative book on Catholic heritage homes

**The Hindu Bureau**
MANGALURU

With their distinctive architecture and enduring family histories, traditional Mangalorean Catholic houses are among the city's most recognisable heritage landmarks.

Capturing their architectural beauty and rich history, the Mangaluru Chapter of the Indian National Trust for Art and Cultural Heritage (INTACH) released a 242-page commemorative book, titled "Album of the Porches: A Photographic Documentation of Mangalorean Catholic Houses", at Mount Pleasant, a historic Catholic heritage home, on Saturday.

The book was released by A. Albuquerque & Sons, and Mona Mendonca, assistant professor and head of the Department of History at St. Aloysius (Deemed to be University).

Introducing the project, INTACH Mangaluru Chapter convener and architect Subhas Chandra Basu said the book documents a unique architectural tradition that has long distinguished Mangaluru's Catholic community.

He observed that while many of these homes have been preserved for generations, changing lifestyles have left several underutilised. The project was led by architect Sharvani Bhat, who coordinated the documentation, and architect-photographer Murali Abbemane.

Together, they documented 27 heritage homes across Mangaluru, recording their architecture, history, and associated memories. Project supporters, journalist Vincent D'Souza, Nayana Fernandes and Sabrina Britto Hougaard, were felicitated during the programme.

Sharvani Bhat and Murali Abbemane also shared their experiences of documenting the houses and interacting with their residents.

*Varthabharathi 26-07-2026*

## ಸಂತ ಅಲೋಶಿಯಸ್ ವಿದ್ಯಾರ್ಥಿಗಳ ಪರಿಷತ್ ಉದ್ಘಾಟನೆ




ಮಂಗಳೂರು, ಜು.25: ಮಂಗಳೂರಿನ ಸಂತ ಅಲೋಶಿಯಸ್ ಸ್ವಾಯತ್ತ ಕಾಲೇಜಿನ 2026-27ನೇ ಸಾಲಿನ ವಿದ್ಯಾರ್ಥಿಗಳ ಪರಿಷತ್‌ನ ಉದ್ಘಾಟನಾ ಸಮಾರಂಭ ಸೋಮವಾರ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಈ ಸಂದರ್ಭ ಸ್ಲೋವಾಕಿಯಾದ ಟ್ರನಾವಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಮಿಲೊಸ್ ಲಿಚ್ನರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ಫಾ.ಬ್ರಾಯನ್ ಪಿರೇರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ವಿದ್ಯಾರ್ಥಿ ಪರಿಷತ್‌ನ 2026-27ನೇ ಸಾಲಿನ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.

ಈ ಸಂದರ್ಭ ಸಂತ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಫಾ.ಪ್ರವೀಣ್ ಮಾರ್ಟಿಸ್, ವಿವಿಯ ಕುಲಸಚಿವ ಡಾ.ರೊನಾಲ್ಡ್ ನಝ್ರೆತ್, ವಿದ್ಯಾರ್ಥಿ ಪರಿಷತ್‌ನ ಸದಸ್ಯರು, ವಿವಿಧ ಬ್ಲಾಕ್‌ಗಳ ಡೀನ್‌ಗಳಾದ ಡಾ.ಮನೋಹರ್ ಸೆರಾವೊ, ಡಾ.ಅರುಣ ಕಲ್ಲೂರ, ಡಾ.ಆಶಾ ಅಬ್ರಹಾಮ್, ಡಾ.ಮಮತಾ, ಕ್ಲಾರೆಟ್ ವಿನಯಾ ಪಿರೇರ, ಡಾ.ಲವೀನಾ ಲೋಬೊ, ಡಾ.ರೆನಿಟಾ ಮರಿಯಾ ಡಿಸೋಜ, ಡಾ.ರೂಬನ್ ಎಸ್., ಡಾ.ಸುಚೇತಾ ವಿಜಯಕುಮಾರ್, ಡಾ.ರೇಚಲ್ ನತಾಶ ಮೇರಿ, ಡಾ.ಮೆಲಿಸಾ ಗೋವಿಯಸ್, ಶಾರೊಲಿನ್ ಮೆನೇಜಸ್, ಡಾ.ಡೆಲ್ಲಾ ಡಿ. ಲೋಬೊ, ಡಾ.ಸ್ನೇಹಾ ಬಾಲರಾಜ್, ವಿವಿಧ ಸಹಾಯಕ ಡೀನ್‌ಗಳು ಉಪಸ್ಥಿತರಿದ್ದರು.

ಸಹಾಯಕ ನಿರ್ದೇಶಕಿ ಬಿನ್ನಿ ಜಾನ್ ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿನಿ ವೆರಿನಾ ಕಾರ್ಯಕ್ರಮ ನಿರೂಪಿಸಿದರು. ಜಿಸೆಲ್ ಪರ್ಲ್ ವಾಸ್ ಈ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿ ಪರಿಷತ್‌ನ ಮೂಲಕ ಕೈಗೊಳ್ಳಲಾಗುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ವಿದ್ಯಾರ್ಥಿ ಪರಿಷತ್‌ನ ನಿರ್ದೇಶಕ ಡಾ.ಅನೂಪ್ ಡೆನ್ಸಿಲ್ ವೇಗಸ್ ಸ್ವಾಗತಿಸಿದರು. ಉಪಾಧ್ಯಕ್ಷ ಜೀವನ್ ಡಿಮೆಲ್ಲೊ ವಂದಿಸಿದರು.

*Udayavani 28-07-2026*

## 'ಆಲ್ಬಮ್ ಆಫ್ ದಿ ಪೋರ್ಚಸ್' ಪುಸ್ತಕ ಬಿಡುಗಡೆ



**ಕೊಡಿಯಾಲಬೈಲು, ಜು. 27:** ವಿಶಿಷ್ಟವಾಸ್ತುಶಿಲ್ಪ ಹಾಗೂ ತಲೆಮಾರುಗಳ ಕುಟುಂಬದ ನೆನಪುಗಳನ್ನು ಹೊತ್ತಿರುವ ಸಾಂಪ್ರದಾಯಿಕ ಮಂಗಳೂರಿನ ಕ್ಯಾಥೋಲಿಕ್ ಮನೆಗಳು ನಗರದ ಪ್ರಮುಖ ಸಾಂಸ್ಕೃತಿಕ ಪರಂಪರೆಯ ಸಂಕೇತಗಳಾಗಿವೆ. ಇಂತಹ ಮನೆಗಳ ವಾಸ್ತುಶಿಲ್ಪದ ಸೊಬಗು ಮತ್ತು ಸಮೃದ್ಧ ಇತಿಹಾಸವನ್ನು ದಾಖಲಿಸುವ ಆಲ್ಬಮ್ ಆಫ್ ದಿ ಪೋರ್ಚಸ್ ಎಂಬ ಶೀರ್ಷಿಕೆಯ ಸ್ಮರಣ ಗ್ರಂಥವನ್ನು ಭಾರತೀಯ ಕಲೆ ಮತ್ತು ಪರಂಪರೆ ಸಂಸ್ಥೆ ಇಂಟ್ಯಾಕ್‌ನ ಮಂಗಳೂರು ಘಟಕದಿಂದ ಮೌಂಟ್ ಪ್ಲೆಸೆಂಟ್‌ನಲ್ಲಿ ಬಿಡುಗಡೆಗೊಳಿಸಲಾಯಿತು.

242 ಪುಟಗಳ ಈ ಪುಸ್ತಕವನ್ನು ಎ. ಅಲ್ಬುಕರ್ಕ್ ಅಂಡ್ ಸನ್ಸ್‌ನ ವ್ಯವಸ್ಥಾಪಕ ಪಾಲುದಾರ ಜಾರ್ಜ್ ಅಲ್ಬುಕರ್ಕ್ ಪೈ ಹಾಗೂ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಮುಖ್ಯಸ್ಥೆ ಹಾಗೂ ಸಹಾಯಕ ಪ್ರಾಧ್ಯಾಪಕಿ ಡಾ। ಮೋನಾ ಮೆಂಡೋನ್ಸಾ ಅವರು ಬಿಡುಗಡೆಗೊಳಿಸಿದರು.

ಯೋಜನೆಯನ್ನು ಪರಿಚಯಿಸಿದ ಇಂಟ್ಯಾಕ್ ಮಂಗಳೂರು ಘಟಕದ ಸಂಚಾಲಕ ಹಾಗೂ ವಾಸ್ತುಶಿಲ್ಪಿ ಸುಭಾಸ್ ಚಂದ್ರ ಬಸು, ಈ ಕೃತಿ ಮಂಗಳೂರಿನ ಕ್ಯಾಥೋಲಿಕ್ ಸಮುದಾಯದ ವಿಶಿಷ್ಟ ವಾಸ್ತು ಪರಂಪರೆಯನ್ನು ದಾಖಲಿಸುವ ಪ್ರಯತ್ನವಾಗಿದೆ ಎಂದರು.

ಈ ಯೋಜನೆಯ ದಾಖಲಾತಿ ಕಾರ್ಯವನ್ನು ವಾಸ್ತುಶಿಲ್ಪಿ ಶರ್ವಾಣಿ ಭಟ್ ಮಾಡಿದರೆ, ಛಾಯಾಚಿತ್ರ ದಾಖಲಾತಿಯನ್ನು ವಾಸ್ತುಶಿಲ್ಪಿ- ಛಾಯಾಗ್ರಾಹಕ ಮುರಳಿ ಅಬ್ಬೆಮನೆ ನಿರ್ವಹಿಸಿದರು.

ಜಾರ್ಜ್ ಅಲ್ಬುಕರ್ಕ್ ಪೈ, ಈ ಪುಸ್ತಕವು ಸಮುದಾಯದ ಪರಂಪರೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಒಂದು ಅಮೂಲ್ಯವಾದ ಕೊಡುಗೆಯಾಗಿದೆ ಎಂದರು.

ಪರಂಪರೆಯ ಕಟ್ಟಡಗಳ ದಾಖಲಾತಿಯ ಸವಾಲುಗಳ ಕುರಿತು ಡಾ। ಮೋನಾ ಮೆಂಡೋನ್ಸಾ ಮಾತನಾಡಿದರು. ಪತ್ರಕರ್ತ ವಿನ್ಸೆಂಟ್ ಡಿ'ಸೋಜಾ, ನಯನಾ ಫೆರ್ನಾಂಡಿಸ್ ಹಾಗೂ ಸಬ್ರಿನಾ ಬ್ರಿಟ್ಟೊ-ಹೌಗಾರ್ಡ್ ಅವರನ್ನು ಕಾರ್ಯಕ್ರಮದಲ್ಲಿ ಸಮ್ಮಾನಿಸಲಾಯಿತು.

ಶರ್ವಾಣಿ ಮತ್ತು ಮುರಳಿ ಅಬ್ಬೆಮನೆ ಅವರು ಮನೆಗಳ ದಾಖಲಾತಿ ಹಾಗೂ ನಿವಾಸಿಗಳೊಂದಿಗೆ ನಡೆಸಿದ ಸಂವಾದದ ಅನುಭವಗಳನ್ನು ಹಂಚಿಕೊಂಡರು.

*Times of India 28-07-2026*

# INTACH launches book documenting Mangalorean Catholic Heritage homes

TIMES NEWS NETWORK

**Mangaluru:** With their distinctive architecture and enduring family histories, traditional Mangalorean Catholic houses are among the city's most recognisable heritage landmarks.

Capturing their architectural beauty and rich history, the Mangaluru Chapter of the Indian National Trust for Art and Cultural Heritage (INTACH) released a commemorative book, 'Album of the Porches: A Photographic Documentation of Mangalorean Catholic Houses' at Mount Pleasant, a historic Catholic heritage home, on Saturday.

The 242-page book was released by George Albuquerque Pai, managing partner of A Albuquerque & Sons, and Mona Mendonca, assistant professor and HoD of History at St Aloysius (Deemed to be University).

Introducing the project, INTACH Mangaluru chapter convener and architect Subhas Chandra Basu said the book documents a unique architectural tradition that has long distinguished Mangaluru's Catholic community. He observed that while many of these homes have been preserved for generations, changing lifestyles have left several underutilised. "Conservation need not always mean preserving them as residences alone. Sensitive adaptive reuse as cafés, galleries or cultural spaces can also help ensure their survival," he said.



Felicitation of Sabrina Britto-Hougaard and Yesper Hougaard during the launch of 'Album of the Porches: A Photographic Documentation of Mangalorean Catholic Houses', in Mangaluru

The project was led by architect Sharvani Bhat, who coordinated the documentation, and architect-photographer Murali Abbemane. Together they documented 27 heritage homes across Mangaluru, recording their architecture, history and associated memories. Commending the initiative, George Albuquerque Pai described the book as a valuable contribution to preserving the community's heritage. "Maintaining these houses is both physically and financially demanding, but I hope they will continue to be preserved as an important part of Mangaluru's cultural legacy for future generations," he said.

Mona Mendonca spoke about the challenges of documenting heritage buildings. "Gaining access to these homes can itself be difficult. Such projects demand patience, commitment and genuine enthusiasm. It is heartening to see young professionals undertaking documentation of this nature," she observed.

Project supporters journalist Vincent D'Souza, Nayana Fernandes and Sabrina Britto-Hougaard were felicitated. Sharvani Bhat and Murali Abbemane also shared their experiences of documenting the houses and interacting with their residents.

*Deccan Herald 28-07-2026*

# INTACH brings out book on Catholic heritage homes

MANGALURU, DHNS

With their distinctive architecture and enduring family histories, traditional Mangalorean Catholic houses are among the city's most recognisable heritage landmarks. Capturing their architectural beauty and rich history, the Mangaluru Chapter of the Indian National Trust for Art and Cultural Heritage (INTACH) released a commemorative book 'Album of the Porches: A Photographic Documentation of Mangalorean Catholic Houses' at Mount Pleasant, a historic Catholic heritage home in the city.

The 242-page book was released by George Albuquerque Pai, Managing Partner of A Albuquerque & Sons, and Dr Mona Mendonca, Assistant Professor and Head of the Department of History at St Aloysius (Deemed to be University).




George Albuquerque Pai, Managing Partner of A Albuquerque & Sons, speaks during the release of 'Album of the Porches: A Photographic Documentation of Mangalorean Catholic Houses', in Mangaluru.

Introducing the project, INTACH Mangaluru Chapter Convener and architect Subhas Chandra Basu said the book documented a unique architectural tradition that had long distinguished Mangaluru's Catholic community.

He observed that while many of these homes have been preserved for generations, changing lifestyles have left several underutilised. "Conservation need not always mean preserving them as residences alone. Sensitive adaptive reuse as cafés, galleries or cultural spaces can also help ensure their survival."

The project was led by architect Sharvani Bhat, who coordinated the documentation, and architect-photographer Murali Abbemane. Together they documented 27 heritage homes across Mangaluru, recording their architecture, history and associated memories.

Commending the initiative, George Albuquerque Pai described the book as a valuable contribution to preserving the community's heritage. "Maintaining these houses is both physically and financially demanding, but I hope they will continue to be preserved as an important part of Mangaluru's cultural legacy for future generations," he said.

Dr Mona Mendonca spoke about the challenges of documenting heritage buildings. "Gaining access to these homes can itself be difficult. Such projects demand patience, commitment and genuine enthusiasm. It is heartening to see young professionals undertaking documentation of this nature," she observed.

Sharvani Bhat and Murali Abbemane also shared their experiences of documenting the houses and interacting with their residents.

Published by the Art Kanara Trust, the book is a rare collectors' item priced at Rs 1,350 and currently offered at a special price of Rs 1,000. Copies are available at the INTACH Mangaluru Chapter office at the Kodialguthu Centre for Art and Culture, GG Road, Ballalbagh.

*Varthabharathi 28-07-2026*

# ‘ಆಲ್ಬಮ್ ಆಫ್ ದಿ ಪೋರ್ಚಸ್’ ಪುಸ್ತಕ ಬಿಡುಗಡೆ



ಮಂಗಳೂರು, ಜು.27: ವಿಶಿಷ್ಟ ವಾಸ್ತುಶಿಲ್ಪ ಹಾಗೂ ತಲೆಮಾರುಗಳ ಕುಟುಂಬದ ನೆನಪುಗಳನ್ನು ಹೊತ್ತಿರುವ ಸಾಂಪ್ರದಾಯಿಕ ಮಂಗಳೂರಿನ ಕೆಥೊಲಿಕ್ ಮನೆಗಳು ನಗರದ ಪ್ರಮುಖ ಸಾಂಸ್ಕೃತಿಕ ಪರಂಪರೆಯ ಸಂಕೇತಗಳಾಗಿವೆ. ಇಂತಹ ಮನೆಗಳ ವಾಸ್ತುಶಿಲ್ಪದ ಸೊಬಗು ಮತ್ತು ಸಮೃದ್ಧ ಇತಿಹಾಸವನ್ನು ದಾಖಲಿಸುವ 'ಆಲ್ಬಮ್ ಆಫ್ ದಿ ಪೋರ್ಚಸ್' ಶೀರ್ಷಿಕೆಯ ಪುಸ್ತಕವನ್ನು ಭಾರತೀಯ ಕಲೆ ಮತ್ತು ಪರಂಪರೆ ಸಂಸ್ಥೆ (ಇಂಟ್ಯಾಕ್)ಯ ಮಂಗಳೂರು ಘಟಕವು ನಗರದ ಐತಿಹಾಸಿಕ ಕೆಥೊಲಿಕ್ ಪರಂಪರೆಯ ಮನೆಯಾಗಿರುವ ಮೌಂಟ್ ಪ್ಲೆಸೆಂಟ್‌ನಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿತು.

ಎ.ಅಲ್ಬುಕರ್ಕ್ ಆಂಡ್ ಸನ್ಸ್‌ನ ವ್ಯವಸ್ಥಾಪಕ ಪಾಲುದಾರ ಜಾರ್ಜ್ ಅಲ್ಬುಕರ್ಕ್ ಪೈ ಹಾಗೂ ಸಂತ ಅಲೋಶಿಯಸ್ ಪರಿಗಣಿತ ವಿವಿಯ ಇತಿಹಾಸ ಭಾಗದ ಮುಖ್ಯಸ್ಥೆ ಹಾಗೂ ಸಹಾಯಕ ಪ್ರಾಧ್ಯಾಪಕಿ ಡಾ.ಮೋನಾ ಮೆಂಡೋನ್ಸಾ ಕೃತಿಯನ್ನು ಬಿಡುಗಡೆಗೊಳಿಸಿದರು.

ಇಂಟ್ಯಾಕ್ ಮಂಗಳೂರು ಘಟಕದ ಸಂಚಾಲಕ ಹಾಗೂ ವಾಸ್ತುಶಿಲ್ಪಿ ಸುಭಾಸ್ ಚಂದ್ರ ಬಸು ಕೃತಿ ಪರಿಚಯ ಮಾಡಿದರು. ಯೋಜನೆಗೆ ಸಹಕರಿಸಿದ ಪತ್ರಕರ್ತ ವಿನ್ಸೆಂಟ್ ಡಿಸೋಜ, ನಯನಾ ಫೆರ್ನಾಂಡಿಸ್, ಸಬ್ರಿನಾ ಬ್ರಿಟ್ಟೊ-ಹೌಗಾರ್ಡ್‌ರನ್ನು ಈ ಸಂದರ್ಭ ಸನ್ಮಾನಿಸಲಾಯಿತು.

ದಾಖಲಾತಿ ಕಾರ್ಯವನ್ನು ಮುನ್ನಡೆಸಿದ ವಾಸ್ತುಶಿಲ್ಪಿ ಶರ್ವಾಣಿ ಭಟ್, ಛಾಯಾಚಿತ್ರ ದಾಖಲಾತಿಯನ್ನು ನಿರ್ವಹಿಸಿದ ವಾಸ್ತುಶಿಲ್ಪಿ-ಛಾಯಾಗ್ರಾಹಕ ಮುರಳಿ ಅಬ್ಬೆಮನೆ ಉಪಸ್ಥಿತರಿದ್ದರು.

*Vijaya Karnataka 28-07-2026*

# ‘ಆಲ್ಬಮ್ ಆಫ್ ದಿ ಪೋರ್ಚಸ್’ ಪುಸ್ತಕ ಬಿಡುಗಡೆ



**ಕೊಡಿಯಾಲಬೈಲು, ಜು. 27:** ವಿಶಿಷ್ಟವಾಸ್ತುಶಿಲ್ಪ ಹಾಗೂ ತಲೆಮಾರುಗಳ ಕುಟುಂಬದ ನೆನಪುಗಳನ್ನು ಹೊತ್ತಿರುವ ಸಾಂಪ್ರದಾಯಿಕ ಮಂಗಳೂರಿನ ಕ್ಯಾಥೋಲಿಕ್ ಮನೆಗಳು ನಗರದ ಪ್ರಮುಖ ಸಾಂಸ್ಕೃತಿಕ ಪರಂಪರೆಯ ಸಂಕೇತಗಳಾಗಿವೆ. ಇಂತಹ ಮನೆಗಳ ವಾಸ್ತುಶಿಲ್ಪದ ಸೊಬಗು ಮತ್ತು ಸಮೃದ್ಧ ಇತಿಹಾಸವನ್ನು ದಾಖಲಿಸುವ ಆಲ್ಬಮ್ ಆಫ್ ದಿ ಪೋರ್ಚಸ್ ಎಂಬ ಶೀರ್ಷಿಕೆಯ ಸ್ಮರಣ ಗ್ರಂಥವನ್ನು ಭಾರತೀಯ ಕಲೆ ಮತ್ತು ಪರಂಪರೆ ಸಂಸ್ಥೆ ಇಂಟ್ಯಾಕ್‌ನ ಮಂಗಳೂರು ಘಟಕದಿಂದ ಮೌಂಟ್ ಪ್ಲೆಸೆಂಟ್‌ನಲ್ಲಿ ಬಿಡುಗಡೆಗೊಳಿಸಲಾಯಿತು.

242 ಪುಟಗಳ ಈ ಪುಸ್ತಕವನ್ನು ಎ. ಅಲ್ಬುಕರ್ಕ್ ಅಂಡ್ ಸನ್ಸ್‌ನ ವ್ಯವಸ್ಥಾಪಕ ಪಾಲುದಾರ ಜಾರ್ಜ್ ಅಲ್ಬುಕರ್ಕ್ ಪೈ ಹಾಗೂ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಮುಖ್ಯಸ್ಥೆ ಹಾಗೂ ಸಹಾಯಕ ಪ್ರಾಧ್ಯಾಪಕಿ ಡಾ| ಮೋನಾ ಮೆಂಡೋನ್ಸಾ ಅವರು ಬಿಡುಗಡೆಗೊಳಿಸಿದರು.

ಯೋಜನೆಯನ್ನು ಪರಿಚಯಿಸಿದ ಇಂಟ್ಯಾಕ್ ಮಂಗಳೂರು ಘಟಕದ ಸಂಚಾಲಕ ಹಾಗೂ ವಾಸ್ತುಶಿಲ್ಪಿ ಸುಭಾಸ್ ಚಂದ್ರ ಬಸು, ಈ ಕೃತಿ ಮಂಗಳೂರಿನ ಕ್ಯಾಥೋಲಿಕ್ ಸಮುದಾಯದ ವಿಶಿಷ್ಟ ವಾಸ್ತು ಪರಂಪರೆಯನ್ನು ದಾಖಲಿಸುವ ಪ್ರಯತ್ನವಾಗಿದೆ ಎಂದರು.

ಈ ಯೋಜನೆಯ ದಾಖಲಾತಿ ಕಾರ್ಯವನ್ನು ವಾಸ್ತುಶಿಲ್ಪಿ ಶರ್ವಾಣಿ ಭಟ್ ಮಾಡಿದರೆ, ಛಾಯಾಚಿತ್ರ ದಾಖಲಾತಿಯನ್ನು ವಾಸ್ತುಶಿಲ್ಪಿ- ಛಾಯಾಗ್ರಾಹಕ ಮುರಳಿ ಅಬ್ಬೆಮನೆ ನಿರ್ವಹಿಸಿದರು.

ಜಾರ್ಜ್ ಅಲ್ಬುಕರ್ಕ್ ಪೈ, ಈ ಪುಸ್ತಕವು ಸಮುದಾಯದ ಪರಂಪರೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಒಂದು ಅಮೂಲ್ಯವಾದ ಕೊಡುಗೆಯಾಗಿದೆ ಎಂದರು.

ಪರಂಪರೆಯ ಕಟ್ಟಡಗಳ ದಾಖಲಾತಿಯ ಸವಾಲುಗಳ ಕುರಿತು ಡಾ| ಮೋನಾ ಮೆಂಡೋನ್ಸಾ ಮಾತನಾಡಿದರು. ಪತ್ರಕರ್ತ ವಿನ್ಸೆಂಟ್ ಡಿ'ಸೋಜಾ, ನಯನಾ ಫೆರ್ನಾಂಡಿಸ್ ಹಾಗೂ ಸಬ್ರಿನಾ ಬ್ರಿಟ್ಟೊ-ಹೌಗಾರ್ಡ್ ಅವರನ್ನು ಕಾರ್ಯಕ್ರಮದಲ್ಲಿ ಸಮ್ಮಾನಿಸಲಾಯಿತು.

ಶರ್ವಾಣಿ ಮತ್ತು ಮುರಳಿ ಅಬ್ಬೆಮನೆ ಅವರು ಮನೆಗಳ ದಾಖಲಾತಿ ಹಾಗೂ ನಿವಾಸಿಗಳೊಂದಿಗೆ ನಡೆಸಿದ ಸಂವಾದದ ಅನುಭವಗಳನ್ನು ಹಂಚಿಕೊಂಡರು.

*Indian Express 28-07-2026*

# Photographic Documentation of Mangalorean Catholic Houses released

**EXPRESS NEWS SERVICE**
@ Mangaluru

THE Mangaluru Chapter of the Indian National Trust for Art and Cultural Heritage (INTACH) released a commemorative book, Album of the Porches: A Photographic Documentation of Mangalorean Catholic Houses, at Mount Pleasant, a historic Catholic heritage home, in the city on Saturday.

George Albuquerque Pai, Managing Partner of A. Albuquerque & Sons, and Dr Mona Mendonca, Assistant Professor and Head of the Department of History at St Aloysius (Deemed to be University), released the 242-page book.

Introducing the project, INTACH Mangaluru Chapter Convener and architect Subhas Chandra Basu said the book documents a unique architectural tradition that has long distinguished Mangaluru's Catholic community. He observed that while many of these homes have been preserved for generations, changing lifestyles have left several underutilised. "Conservation need not always mean preserving them as residences alone. Sensitive adaptive reuse as cafés, galleries or cultural spaces can also help ensure their survival," he said. The project was led by architect Sharvani Bhat, who coordinated the documentation, and architect-photographer Murali Abbemane. Together they documented 27 heritage homes across Mangaluru, recording their architecture, history and associated memories.

Commending the initiative, George Albuquerque Pai described the book as a valuable contribution to preserving the community's heritage. "Maintaining these houses is both physically and financially demanding, but I hope they will continue to be preserved as an important part of Mangaluru's cultural legacy for future generations," he said. Dr Mona Mendonca spoke about the challenges of documenting heritage buildings. "Gaining access to these homes can itself be difficult. Such projects demand patience, commitment and genuine enthusiasm. It is heartening to see young professionals undertaking documentation of this nature," she observed.



George Albuquerque Pai, Managing Partner of A. Albuquerque & Sons and others releasing a book in Mangaluru on Saturday | EXPRESS

*Janamithra 31-07-2026*

# ಸಂತ ಅಲೋಶಿಯಸ್ ವಿವಿಗೆ 'ರಾಷ್ಟ್ರೀಯ ಹಸಿರು ವಿಶ್ವವಿದ್ಯಾಲಯ' ಶ್ರೇಯಾಂಕ

Published 13 seconds ago on July 31, 2026
By Janamitra



**ಮಂಗಳೂರು**:ಸಂತ ಅಲೋಶಿಯಸ್ (ಪರಿಗಣಿತ ವಿಶ್ವವಿದ್ಯಾಲಯ) ರಾಷ್ಟ್ರೀಯ ಹಸಿರು ವಿಶ್ವವಿದ್ಯಾಲಯ ಶ್ರೇಯಾಂಕ (NGUR) 2026ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ 23ನೇ ಹಾಗೂ ರಾಜ್ಯ ಮಟ್ಟದಲ್ಲಿ 4ನೇ ಸ್ಥಾನ ಪಡೆದುಕೊಂಡಿದೆ. ಪರಿಸರ ಸುಸ್ಥಿರತೆ, ಹವಾಮಾನ ಕಾಳಜಿ ಮತ್ತು ಜೈವಿಕ ವೈವಿಧ್ಯತೆಯ ಸಂರಕ್ಷಣೆಯಲ್ಲಿ ವಿವಿಯ ಸಾಧನೆಯನ್ನು ಪರಿಗಣಿಸಿ 'ಗ್ರೀನ್ ಮೆಂಟರ್ಸ್' ಸಂಸ್ಥೆಯು 100ಕ್ಕೆ 91 ಅಂಕ ನೀಡುವ ಮೂಲಕ ಈ ಮಾನ್ಯತೆ ನೀಡಿದೆ.

ಹತ್ತು ಪ್ರಮುಖ ಸುಸ್ಥಿರತೆಯ ಮಾನದಂಡಗಳ ಆಧಾರದ ಮೇಲೆ ನಡೆದಿರುವ ಈ ಮೌಲ್ಯಮಾಪನದಲ್ಲಿ ವಿವಿ ಉತ್ತಮ ಸಾಧನೆ ತೋರಿದ್ದು, ನ್ಯೂಯಾರ್ಕ್‌ನಲ್ಲಿ ನಡೆಯಲಿರುವ 10ನೇ 'ಎನ್‌ವೈಸಿ ಹಸಿರು ಶಾಲಾ ಸಮ್ಮೇಳನ 2026'ರಲ್ಲಿ ಭಾಗವಹಿಸಲು ಕೂಡ ಆಹ್ವಾನ ಪಡೆದಿದೆ. ಈ ಸಾಧನೆಗೆ ಶ್ರಮಿಸಿದ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಸಾಮೂಹಿಕ ಕೊಡುಗೆಯನ್ನು ವಿವಿ ಆಡಳಿತ ಮಂಡಳಿ ಶ್ಲಾಘಿಸಿದೆ.

## Honorary Colonel and Colonel Commandant Rank Conferred upon Hon'ble Vice Chancellor Rev. Dr Praveen Martis SJ.

*Prajavani 28-06-2026*

### ಕರ್ನಲ್ ಕಮಾಂಡೆಂಟ್ ಆಗಿ ಪ್ರವೀಣ್ ಮಾರ್ಟಿಸ್

ಮಂಗಳೂರು: ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ಪ್ರವೀಣ್ ಮಾರ್ಟಿಸ್ ಅವರನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್‌ನಲ್ಲಿ (ಎನ್‌ಸಿಸಿ) ಗೌರವ ಕರ್ನಲ್ ಹುದ್ದೆ 'ಕರ್ನಲ್ ಕಮಾಂಡೆಂಟ್' ಆಗಿ ನೇಮಕ ಮಾಡಲಾಗಿದೆ.



ಪ್ರವೀಣ್ ಮಾರ್ಟಿಸ್

ಎನ್‌.ಸಿ.ಸಿ. ಪ್ರಧಾನ ಕಚೇರಿ, ಮಂಗಳೂರು ಗ್ರೂಪ್‌ನವರು ಪ್ರವೀಣ್ ಮಾರ್ಟಿಸ್ ಅವರನ್ನು ಈ ಗೌರವಕ್ಕೆ ಶಿಫಾರಸು ಮಾಡಿದ್ದರು. ಈ ವಿಶಿಷ್ಟ ರಾಷ್ಟ್ರೀಯ ಮನ್ನಣೆ ನೀಡಿರುವ ಕುರಿತು ಭಾರತದ ರಾಜ್ಯಪತ್ರದಲ್ಲಿ ಮೇ 2ರಂದು ಪ್ರಕಟಿಸಲಾಗಿದೆ. ಜುಲೈ ತಿಂಗಳಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಹಿರಿಯ ಅಧಿಕಾರಿಗಳಿಂದ (ಎನ್‌ಸಿಸಿ ಅಧಿಕಾರಿಗಳು) ಅವರು ಈ ಗೌರವ ಸ್ವೀಕರಿಸಲಿದ್ದಾರೆ ಎಂದು ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

*Karavali suddi 12-07-2026*



### ಅಲೋಶಿಯಸ್ ವಿವಿ ಕುಲಪತಿಗೆ NCC 'ಕರ್ನಲ್ ಕಮಾಂಡೆಂಟ್' ಗೌರವ

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ವಂದನೀಯ ಡಾ. ಪ್ರವೀಣ್ ಮಾರ್ಟಿಸ್, ಎಸ್.ಜೆ. ಅವರಿಗೆ ಭಾರತ ಸರ್ಕಾರವು ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (NCC)ಯ ಗೌರವ ಕರ್ನಲ್ ಹುದ್ದೆಯೊಂದಿಗೆ ಪ್ರತಿಷ್ಠಿತ 'ಕರ್ನಲ್ ಕಮಾಂಡೆಂಟ್' ಗೌರವವನ್ನು ಅಧಿಕೃತವಾಗಿ ನೀಡಿದೆ. ಭಾರತ ಸರ್ಕಾರ ಹೊರಡಿಸಿದ ಆದೇಶದಂತೆ ಈ ನೇಮಕಾತಿ ಜಾರಿಯಾಗಿದ್ದು, ಈ ಗೌರವಕ್ಕಾಗಿ NCC ಪ್ರಧಾನ ಕಚೇರಿ, ಮಂಗಳೂರು ಗ್ರೂಪ್ ಶಿಫಾರಸು ಮಾಡಿತ್ತು. ಈ ವಿಶೇಷ ರಾಷ್ಟ್ರೀಯ ಗೌರವವು ಮೇ 2, 2026ರ ಭಾರತದ ಅಧಿಕೃತ ಗೆಜೆಟ್‌ನಲ್ಲೂ ಪ್ರಕಟವಾಗಿದ್ದು, ಕುಲಪತಿಗಳು ತಮ್ಮ ಅಧಿಕಾರಾವಧಿಯವರೆಗೆ ಈ ಗೌರವ ಹುದ್ದೆಯನ್ನು ಅಲಂಕರಿಸಲಿದ್ದಾರೆ. ಈ ಅಪರೂಪದ ಗೌರವವು ವಂದನೀಯ ಡಾ. ಪ್ರವೀಣ್ ಮಾರ್ಟಿಸ್ ಅವರ ದೂರದೃಷ್ಟಿಯ ನಾಯಕತ್ವ, ಯುವಜನರಲ್ಲಿ ಶಿಸ್ತು, ನಾಯಕತ್ವ ಹಾಗೂ ರಾಷ್ಟ್ರಸೇವೆಯ ಮನೋಭಾವ ಬೆಳೆಸುವಲ್ಲಿ ಅವರು ನೀಡಿರುವ ಕೊಡುಗೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಿದಂತಾಗಿದೆ. ಜುಲೈ ತಿಂಗಳಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಹಿರಿಯ NCC ಅಧಿಕಾರಿಗಳಿಂದ ಅವರು ಈ ಗೌರವವನ್ನು ಅಧಿಕೃತವಾಗಿ ಸ್ವೀಕರಿಸಲಿದ್ದಾರೆ. ಈ ಪ್ರತಿಷ್ಠಿತ ಸಾಧನೆಗೆ ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಹಿತೈಷಿಗಳು ವಂದನೀಯ ಡಾ. ಪ್ರವೀಣ್ ಮಾರ್ಟಿಸ್, ಎಸ್.ಜೆ. ಅವರನ್ನು ಅಭಿನಂದಿಸಿ, ವಿಶ್ವವಿದ್ಯಾನಿಲಯಕ್ಕೆ ಸಂದ ಹೆಮ್ಮೆಯ ಕ್ಷಣವೆಂದು ಬಣ್ಣಿಸಿದ್ದಾರೆ.

*The Hindu 18-07-2026*

### St. Aloysius V-C gets honorary Colonel rank

**The Hindu Bureau**
MANGALURU

Air Commodore Kamal Chadha, Deputy Director General, National Cadet Corps (NCC) Directorate Karnataka and Goa, conferred the honorary rank of Colonel and the appointment of Colonel Commandant on Praveen Martis, Vice-Chancellor of St Aloysius (Deemed to be University), Mangaluru, on Thursday.



Air Commodore Kamal Chadha (third from left) honours Praveen Martis, V-C of St Aloysius (Deemed to be University) by conferring on him the honorary rank of Colonel. SPECIAL ARRANGEMENT

The conferment recognises the vice-chancellor's contribution to education, youth empowerment, leadership, and nation-building, a release said. In his honorary role, he is expected to further strengthen the relationship between the university and the NCC and inspire students to participate actively in NCC training and national integration. The Mangalore NCC Group has a substantial presence across 239 educational institutions in Dakshina Kannada, Udupi, Kodagu and Shivamogga districts, with a total strength of over 15,700 cadets.

*News Trail 17-07-2026*

# VC of St Aloysius University conferred Honorary Colonel and Colonel Commandant rank

**NT Correspondent**
Mangaluru




Rev. Dr. Praveen Martis SJ, Vice-Chancellor of St Aloysius (Deemed to be University), Mangaluru, was conferred the prestigious honorary appointment of Honorary Colonel and Colonel Commandant by Air Commodore Kamal Chadha, Deputy Director General, NCC Directorate Karnataka and Goa, during a ceremonial function held in Mangaluru on Thursday.

The rare honour recognises Rev. Dr. Martis's outstanding contribution to higher education, youth development, leadership and nation-building through his commitment to shaping socially responsible citizens. With this honorary appointment, he is expected to further strengthen the partnership between St Aloysius University and the National Cadet Corps (NCC), encouraging greater student participation in NCC activities, leadership training, community service and programmes that promote national integration.

Addressing the gathering, Air Commodore Kamal Chadha highlighted the shared responsibility of educational institutions and the NCC in building a disciplined and confident generation of young leaders. He observed that NCC training instils values such as leadership, courage, teamwork, discipline and a deep sense of service to the nation, enabling cadets to become responsible citizens capable of contributing meaningfully to society.

He also outlined the impressive achievements of the Mangalore NCC Group, which currently operates across 239 educational institutions spread over Dakshina Kannada, Udupi, Kodagu and Shivamogga districts, with a combined strength of more than 15,700 cadets.

The Group has consistently excelled at the national level, with cadets earning distinction at the prestigious Republic Day Camp, securing second place in the Inter-Group Championship and winning accolades in national competitions, including drone technology, the All India Nau Sainik Camp, and Idea and Innovation contests. Several NCC cadets from the region have also gone on to join the Armed Forces and Central Armed Police Forces, reflecting the organisation's role in producing capable and committed young leaders.

The growing popularity of NCC among students has prompted an increasing number of educational institutions to seek its inclusion in their academic environment. The collaboration between institutions and the NCC is expected to play a significant role in nurturing disciplined, responsible and patriotic youth while promoting leadership, community service and national development.

The conferment of the rank upon Rev. Dr. Praveen Martis is seen as a recognition not only of his contribution to education but also of the enduring partnership between academia and the NCC in fostering a generation committed to service, discipline and nation-building.

*Vijayavani 17-07-2026*

# ಕರ್ನಲ್ ಕಮಾಂಡೆಂಟ್ ಗೌರವ ಪ್ರದಾನ




ಡಾ.ಪ್ರವೀಣ್ ಮಾರ್ಟಿಸ್‌ಗೆ ಕರ್ನಲ್ ಕಮಾಂಡೆಂಟ್ ಅವರಿಗೆ ಗೌರವ ಪ್ರದಾನ ಮಾಡಲಾಯಿತು. ಕರ್ನಲ್ ವಿರಾಜ್ ಕಾಮತ್, ಎನ್‌ಸಿಸಿ ಮಂಗಳೂರು ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಆರ್.ಪಿ. ರೈ ಮೊದಲಾದವರು ಇದ್ದರು.

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಅವರಿಗೆ ಭಾರತ ಸರ್ಕಾರ ಅಧಿಕೃತವಾಗಿ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (ಎನ್‌ಸಿಸಿ)ನಲ್ಲಿ ಗೌರವ ಕರ್ನಲ್ ಹುದ್ದೆ ಮತ್ತು 'ಕರ್ನಲ್ ಕಮಾಂಡೆಂಟ್' ಆಗಿ ನೇಮಕ ಮಾಡಿದ್ದು, ಈ ವಿಶಿಷ್ಟ ರಾಷ್ಟ್ರೀಯ ಮನ್ನಣೆಯನ್ನು ಗುರುವಾರ ವಿಶ್ವವಿದ್ಯಾಲಯದ ಹಾಲ್‌ನಲ್ಲಿ ಪ್ರದಾನ ಮಾಡಲಾಯಿತು.

ಭಾರತೀಯ ಸಶಸ್ತ್ರ ಪಡೆಗಳ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಎನ್‌ಸಿಸಿ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಡಿಡಿಜಿ, ಏರ್ ಕಮಾಂಡರ್ ಕಮಲ್ ಚಡ್ಡಾ ಪ್ರದಾನ ಮಾಡಿದರು.

ಎನ್‌ಸಿಸಿ ಮಂಗಳೂರು ಗ್ರೂಪ್‌ನ ಗ್ರೂಪ್ ಕಮಾಂಡರ್ ಕರ್ನಲ್ ವಿರಾಜ್ ಕಾಮತ್ ಮತ್ತು 18 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಮಂಗಳೂರು ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಆರ್.ಪಿ. ರೈ ನಾಯಕತ್ವದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು.

*Times of India 18-07-2026*

## St Aloysius VC conferred honorary rank of Colonel Commandant

Rev Dr Praveen Martis SJ, vice-chancellor of St Aloysius (deemed to be university), was conferred the honorary rank of Honorary Colonel and Colonel Commandant on Thursday. The honour was conferred by Air Commodore Kamal Chadha, deputy director general, NCC directorate Karnataka and Goa, in recognition of Martis's contributions to education, youth empowerment and nation-building. In his new role, Martis is

*Samyuktha Karnataka 18-07-2026*

## ಕರ್ನಲ್ ಕಮಾಂಡೆಂಟ್ ಹುದ್ದೆ ಪ್ರದಾನ

**ಸಂ.ಕ.ಸಮಾಚಾರ, ಮಂಗಳೂರು**

ಸಂತ ಅಲೋಶಿಯಸ್ (ಪರಿಗಣಿತ) ವಿಶ್ವವಿದ್ಯಾನಿಲಯದ ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ.ಅವರಿಗೆ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (ಎನ್‌ಸಿಸಿ) ವತಿಯಿಂದ ಪ್ರತಿಷ್ಠಿತ ಗೌರವ ಕರ್ನಲ್ ಹಾಗೂ ಕರ್ನಲ್ ಕಮಾಂಡೆಂಟ್ ಹುದ್ದೆಯನ್ನು ಪ್ರದಾನ ಮಾಡಲಾಗಿದೆ.

ಎನ್‌ಸಿಸಿ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಡೆಪ್ಯುಟಿ ಡೈರೆಕ್ಟರ್ ಜನರಲ್ ಏರ್ ಕಮೋಡೋರ್ ಕಮಲ್ ಚಾಧಾ ಅವರು ಸಮಾರಂಭದಲ್ಲಿ ಈ ಗೌರವವನ್ನು ಪ್ರದಾನಿಸಿದರು. ಶಿಕ್ಷಣ, ಯುವ ಸಬಲೀಕರಣ, ನಾಯಕತ್ವ ಹಾಗೂ ರಾಷ್ಟ್ರ ನಿರ್ಮಾಣ ಕ್ಷೇತ್ರಗಳಲ್ಲಿ ರೆ. ಡಾ. ಪ್ರವೀಣ್ ಮಾರ್ಟಿಸ್ ಸಲ್ಲಿಸಿರುವ ಮಹತ್ವದ ಸೇವೆಯನ್ನು ಪರಿಗಣಿಸಿ ಈ ಗೌರವ ಹುದ್ದೆಯನ್ನು ನೀಡಲಾಗಿದೆ. ಈ ಮೂಲಕ ವಿಶ್ವವಿದ್ಯಾನಿಲಯ ಮತ್ತು ಎನ್‌ಸಿಸಿ ನಡುವಿನ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸುವುದರ ಜೊತೆಗೆ ವಿದ್ಯಾರ್ಥಿಗಳನ್ನು ಎನ್‌ಸಿಸಿ ತರಬೇತಿ, ಸಮುದಾಯ ಸೇವೆ ಹಾಗೂ ರಾಷ್ಟ್ರೀಯ ಏಕೀಕರಣ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವರು ಪ್ರೇರೇಪಿಸಲಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಏರ್ ಕಮೋಡೋರ್ ಕಮಲ್ ಚಾಧಾ, ಶಿಸ್ತುಬದ್ಧ, ಆತ್ಮವಿಶ್ವಾಸಿ ಮತ್ತು ಸಾಮಾಜಿಕ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಹಾಗೂ ಎನ್‌ಸಿಸಿ ಸಮಾನ ಹೊಣೆಗಾರಿಕೆ ಹೊಂದಿವೆ. ಎನ್‌ಸಿಸಿ ತರಬೇತಿಯು ಯುವಜನರಲ್ಲಿ ನಾಯಕತ್ವ, ಧೈರ್ಯ, ತಂಡದ ಮನೋಭಾವ ಮತ್ತು ದೇಶಸೇವೆಯ ಬದ್ಧತೆಯನ್ನು ಬೆಳೆಸುತ್ತದೆ ಎಂದು ಹೇಳಿದರು.

ಮಂಗಳೂರು ಎನ್‌ಸಿಸಿ ಗ್ರೂಪ್ ದ.ಕ., ಉಡುಪಿ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳ 239 ಶಿಕ್ಷಣ ಸಂಸ್ಥೆಗಳಲ್ಲಿ 15,700ಕ್ಕೂ ಹೆಚ್ಚು ಕೆಡೆಟ್‌ಗಳನ್ನು ಹೊಂದಿದ್ದು, ಗಣರಾಜ್ಯೋತ್ಸವ ಶಿಬಿರ, ಅಂತರ ಗುಂಪು ಚಾಂಪಿಯನ್‌ಶಿಪ್, ರಾಷ್ಟ್ರೀಯ ಮಟ್ಟದ ಡ್ರೋನ್, ನೌ ಸೈನಿಕ್ ಹಾಗೂ ಇನ್ನೋವೇಶನ್ ಸ್ಪರ್ಧೆಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಎನ್‌ಸಿಸಿ ತರಬೇತಿ ಮೂಲಕ ಹಲವಾರು ಯುವಕರು ಭಾರತೀಯ ಸಶಸ್ತ್ರ ಪಡೆ ಹಾಗೂ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಿಗೆ ಸೇರ್ಪಡೆಯಾಗಿದ್ದಾರೆ ಎಂದರು.

ಈ ಗೌರವ ಲಭಿಸಿರುವ ಹಿನ್ನೆಲೆಯಲ್ಲಿ ಸಂತ ಅಲೋಶಿಯಸ್ ವಿ.ವಿ.ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ರೆ.ಡಾ.ಪ್ರವೀಣ್ ಮಾರ್ಟಿಸ್ ಅವರನ್ನು ಅಭಿನಂದಿಸಿದ್ದಾರೆ.



*Udayavani 17-07-2026*

# ವಂ। ಡಾ। ಪ್ರವೀಣ್ ಮಾರ್ಟಿಸ್‌ರಿಗೆ ಕರ್ನಲ್ ಕಮಾಂಡೆಂಟ್ ಗೌರವ ಪ್ರಶಸ್ತಿ



**ಮಹಾನಗರ, ಜು. 16:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ರೆ। ಡಾ। ಪ್ರವೀಣ್ ಮಾರ್ಟಿಸ್ ಅವರಿಗೆ ಭಾರತ ಸರಕಾರವು ಅಧಿಕೃತವಾಗಿ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (ಎನ್‌ಸಿಸಿ) ನಲ್ಲಿ ಗೌರವ ಕರ್ನಲ್ ಹುದ್ದೆ ಮತ್ತು 'ಕರ್ನಲ್ ಕಮಾಂಡೆಂಟ್' ಆಗಿ ನೇಮಕ ಮಾಡಿದೆ.

ಈ ರಾಷ್ಟ್ರೀಯ ಮನ್ನಣೆಯನ್ನು ವಿಶ್ವವಿದ್ಯಾಲಯದಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಎನ್‌ಸಿಸಿ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಡಿಡಿಜಿ, ಏರ್‌ಕಮೋಡೋರ್‌ಕಮಲ್ ಚಾಧಾ ಅವರು ಗುರುವಾರ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಏರ್ ಕಮೋಡೋರ್‌ಕಮಲ್ ಚಡ್ಡಾ, ಶಿಕ್ಷಣ ಸಂಸ್ಥೆಗಳು ಮತ್ತು ಎನ್‌ಸಿಸಿ ಶಿಸ್ತುಬದ್ಧ, ಆತ್ಮವಿಶ್ವಾಸ ಮತ್ತು ಸಾಮಾಜಿಕವಾಗಿ ಜವಾಬ್ದಾರಿಯುತ ನಾಗರಿಕರನ್ನು ಅಭಿವೃದ್ಧಿಪಡಿಸುವಲ್ಲಿ ಸಾಮಾನ್ಯ ಜವಾಬ್ದಾರಿಯನ್ನು ಹಂಚಿಕೊಳ್ಳುತ್ತವೆ. ಎನ್‌ಸಿಸಿ ತರಬೇತಿಯು ಯುವಜನರಲ್ಲಿ ನಾಯಕತ್ವ, ಧೈರ್ಯ, ತಂಡದ ಕೆಲಸ ಮತ್ತು ರಾಷ್ಟ್ರದ ಕಡೆಗೆ ಬಲವಾದ ಕರ್ತವ್ಯ ಪ್ರಜ್ಞೆಯನ್ನು ಸಜ್ಜುಗೊಳಿಸುತ್ತದೆ ಎಂದು ಹೇಳಿದರು.

ಮಂಗಳೂರು ಎನ್‌ಸಿಸಿ ಗ್ರೂಪ್ ದಕ್ಷಿಣ ಕನ್ನಡ, ಉಡುಪಿ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳ ಒಟ್ಟು 239 ಶಿಕ್ಷಣ ಸಂಸ್ಥೆಗಳಲ್ಲಿ ಗಣನೀಯ ಉಪಸ್ಥಿತಿಯನ್ನು ಹೊಂದಿದ್ದು ಒಟ್ಟು 15,700 ಕ್ಕೂ ಹೆಚ್ಚು ಕೆಡೆಟ್‌ಗಳನ್ನು ಹೊಂದಿದೆ .

ಎನ್‌ಸಿಸಿ ಮಂಗಳೂರು ಗ್ರೂಪ್ ನ ಗ್ರೂಪ್ ಕಮಾಂಡರ್‌ಕರ್ನಲ್ ವಿರಾಜ್ ಕಾಮತ್ ಮತ್ತು 18 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಮಂಗಳೂರು ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಆರ್. ಪಿ. ರೈ ಅವರ ನಾಯಕತ್ವದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿತ್ತು.

Udayakala 17-07-2026

# ಎನ್ಸಿಸಿ ಗೌರವ ಕರ್ನಲ್ ಹುದ್ದೆಗೆ ರೆ. ಡಾ. ಪ್ರವೀಣ್ ಮಾರ್ಟಿಸ್ ನೇಮಕ




**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್, ಎಸ್.ಜೆ. ಅವರಿಗೆ ಭಾರತ ಸರ್ಕಾರವು ರಾಷ್ಟ್ರೀಯ ಕೆಡೆಟ್ ಕಾಪ್ರ್ (ಎನ್ಸಿಸಿ)ಯ ಗೌರವ ಕರ್ನಲ್ ಹುದ್ದೆ ಹಾಗೂ ಕರ್ನಲ್ ಕಮಾಂಡೆಂಟ್ ಗೌರವವನ್ನು ನೀಡಿದೆ.

ಈ ಸಂಬಂಧದ ಅಧಿಕೃತ ನೇಮಕಾತಿ ಆದೇಶವನ್ನು ಜೂನ್ 25 ರಂದು ಹೊರಡಿಸಲಾಗಿದ್ದು, ಗುರುವಾರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಎನ್ಸಿಸಿ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಉಪ ಮಹಾನಿರ್ದೇಶಕ ಏರ್ ಕಮಾಂಡರ್ ಕಮಲ್ ಚಾಥಾ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ರೆ. ಡಾ. ಪ್ರವೀಣ್ ಮಾರ್ಟಿಸ್ ಅವರು ಕುಲಪತಿಯಾಗಿ ಕಾರ್ಯನಿರ್ವಹಿಸುವ ಅವಧಿಯವರೆಗೆ ಈ ಗೌರವ ಹುದ್ದೆಯನ್ನು ಅಲಂಕರಿಸಲಿದ್ದಾರೆ.

ಈ ವೇಳೆ ಮಾತನಾಡಿದ ಏರ್ ಕಮೋಡೋರ್ ಕಮಲ್ ಚಾಥಾ ಅವರು, ಶಿಕ್ಷಣ ಸಂಸ್ಥೆಗಳು ಮತ್ತು ಎನ್ಸಿಸಿ ಶಿಸ್ತು, ನಾಯಕತ್ವ ಹಾಗೂ ಸಾಮಾಜಿಕ ಹೊಣೆಗಾರಿಕೆಯುಳ್ಳ ನಾಗರಿಕರನ್ನು ರೂಪಿಸುವಲ್ಲಿ ಸಮಾನ ಜವಾಬ್ದಾರಿಯನ್ನು ಹೊಂದಿವೆ ಎಂದು ಹೇಳಿದರು. ಎನ್ಸಿಸಿ ತರಬೇತಿ ಯುವಜನರಲ್ಲಿ ಧೈರ್ಯ, ತಂಡದ ಮನೋಭಾವ, ನಾಯಕತ್ವದ ಗುಣ ಹಾಗೂ ರಾಷ್ಟ್ರಸೇವೆಯ ಬದ್ಧತೆಯನ್ನು ಬೆಳೆಸುತ್ತದೆ ಎಂದರು.

ಮಂಗಳೂರು ಎನ್ಸಿಸಿ ಗ್ರೂಪ್ ವ್ಯಾಪ್ತಿಯ ದಕ್ಷಿಣ ಕನ್ನಡ, ಉಡುಪಿ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳ 239 ಶಿಕ್ಷಣ ಸಂಸ್ಥೆಗಳಲ್ಲಿ 15,700ಕ್ಕೂ ಅಧಿಕ ಕೆಡೆಟ್‌ಗಳು ತರಬೇತಿ ಪಡೆಯುತ್ತಿದ್ದಾರೆ. ಗಣರಾಜ್ಯೋತ್ಸವ ಶಿಬಿರ, ಅಂತರ ಗುಂಪು ಚಾಂಪಿಯನ್‌ಶಿಪ್, ರಾಷ್ಟ್ರೀಯ ಮಟ್ಟದ ಡ್ರೋನ್, ನೌ ಸೈನಿಕ್ ಶಿಬಿರ ಹಾಗೂ ನವೋದ್ಯಮ ಸ್ಪರ್ಧೆಗಳಲ್ಲಿ ಈ ಗ್ರೂಪ್‌ನ ಕೆಡೆಟ್‌ಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ಎನ್ಸಿಸಿ ತರಬೇತಿಯ ಮೂಲಕ ಅನೇಕ ಯುವಕರು ಸಶಸ್ತ್ರ ಪಡೆಗಳು ಹಾಗೂ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಿಗೆ ಸೇರ್ಪಡೆಯಾಗಿದ್ದಾರೆ ಎಂದು ತಿಳಿಸಲಾಯಿತು.

ಎನ್ಸಿಸಿ ಮಂಗಳೂರು ಗ್ರೂಪ್‌ನ ಗ್ರೂಪ್ ಕಮಾಂಡರ್ ಕರ್ನಲ್ ವಿರಾಜ್ ಕಾಮತ್ ಹಾಗೂ 18 ಕರ್ನಾಟಕ ಬೆಟಾಲಿಯನ್‌ನ ಕಮಾಂಡಿಂಗ್ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಆರ್.ಪಿ. ರೈ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪ್ರತಿಷ್ಠಿತ ರಾಷ್ಟ್ರೀಯ ಗೌರವಕ್ಕೆ ಭಾಜನರಾದ ರೆ. ಡಾ. ಪ್ರವೀಣ್ ಮಾರ್ಟಿಸ್ ಅವರನ್ನು ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.




# Digital News Links

1. St Aloysius University Vice Chancellor Conferred Honorary Rank of Colonel Commandant by Government of India
https://konkantimes.com/st-aloysius-university-vice-chancellor-conferred-honorary-rank-of-colonel-commandant-by-government-of-india/
2. ಅಲೋಶಿಯಸ್ ವಿ ವಿ ಕುಲಪತಿಯವರಿಗೆ ಕರ್ನಲ್ ಕಮಾಂಡೆಂಟ್ ಗೌರವ ಪ್ರಶಸ್ತಿ
https://www.upayuktha.com/2026/06/aloysius-university-vice-chancellor-receives-colonel-commandant-honor-award.html
3. St Aloysius University VC Dr Praveen Martis conferred honorary rank of colonel Commandant
https://www.daijiworld.com/news/newsDisplay?newsID=1318306
4. ವಂ.ಡಾ. ಪ್ರವೀಣ್ ಮಾರ್ಟಿಸ್ ಅವರಿಗೆ ಕರ್ನಲ್ ಕಮಾಂಡೆಂಟ್ ಗೌರವ ಪ್ರದಾನ
https://www.vijayavani.net/category/dakshinakannada/honorary-rank-of-colonel-commandant-conferred-on-rev-dr-praveen-martis
5. St Aloysius University Vice-Chancellor Conferred Honorary Colonel and Colonel Commandant Rank
https://konkantimes.com/st-aloysius-university-vice-chancellor-conferred-honorary-colonel-and-colonel-commandant-rank/
6. St Aloysius University vice-chancellor conferred honorary col, colonel commandant
https://daijiworld.com/news/newsDisplay?newsID=1320203
7. Conferment of the Rank of Honorary Colonel to Col ( Dr ) Praveen Martis S J
https://www.youtube.com/watch?v=tEGyrsAon-s
8. ಡಾ.ಪ್ರವೀಣ್ ಮಾರ್ಟಿಸ್‌ರಿಗೆ ಎನ್.ಸಿ.ಸಿ ಕರ್ನಲ್ ಕಮಾಂಡೆಂಟ್ ಗೌರವ
https://www.nammakudlanews.com/dr-praveen-martis-honoured-as-ncc-colonel-commandant/
9. SACAA along with St Aloysius University inaugurates senior citizen forum

https://daijiworld.com/news/newsDisplay?newsID=1318961

10. St Aloysius students honoured for life-saving act of compassion and courage
https://www.daijiworld.com/news/newsDisplay?newsID=1318959
11. 'WAVES-26' fashion show showcases student creativity at St Aloysius University
https://www.daijiworld.com/news/newsDisplay?newsID=1318962
12. ಜೀವ ಉಳಿಸಿದ ಮಾನವೀಯ ಕಾರ್ಯಕ್ಕೆ ಸಂತ ಅಲೋಶಿಯಸ್ ವಿದ್ಯಾರ್ಥಿಗಳಿಗೆ ಸನ್ಮಾನ
https://www.upayuktha.com/2026/07/St.-Aloysius-Students-Honoured-for-their-Humanitarian-Act-of-Saving-a-Life.html
13. ಅಡ್ಕಳ್ಯೊ ಮೊಡುನ್ ನವಿ ವಾಟ್ ತಯಾರ್ ಕಲ್ಯಾಂ – ದೊ| ವಿದ್ಯಾ ವಿನುತಾ ಡಿ ಸೋಜಾ
https://kittall.com/news/43624/
14. Bantwal: PTA annual general body meeting 2026–27 held at Loretto Central School
https://www.daijiworld.com/news/newsDisplay?newsID=1319667
15. From St Aloysius to global success: Alumni achieve ACCA affiliate status
https://daijiworld.com/news/newsDisplay?newsID=1319910
16. Mangaluru: St Aloysius college to organize a 3-day 'Monsoon theatre festival – 2026' from Jul 17
https://daijiworld.com/news/newsDisplay?newsID=1320023
17. Mangaluru: St Aloysius University holds seminar on human rights for support staff
https://www.daijiworld.com/news/newsDisplay?newsID=1320283
18. St Aloysius University holds Students Council 2026-27 Investiture Ceremony
https://www.daijiworld.com/news/newsDisplay?newsID=1320558
19. St Aloysius University holds engineering students induction programme
https://www.daijiworld.com/news/newsDisplay?newsID=1320537
20. ಅರಬ್ಬಿ ಸಮುದ್ರದ ಅಲೆಗಳಲ್ಲೇ ಕೊಂಕಣಿಯ ಘರ್ಜನೆ ಮೊಳಗುತ್ತಿದೆ – ಬಿಷಪ್ ಪೀಟರ್ ಪಾವ್ಲ್ ಸಲ್ಡಾನ್ಹಾ
https://www.mangalorean.com/%e0%b2%85%e0%b2%b0%e0%b2%ac%e0%b3%8d%e0%b2%ac%e0%b2%bf-%e0%b2%b8%e0%b2%ae%e0%b3%81%e0%b2%a6%e0%b3%8d%e0%b2%b0%e0%b2%a6-%e0%b2%85%e0%b2%b2%e0%b3%86%e0%b2%97%e0%b2%b3%e0%b2%b2%e0%b3%8d%e0%b2%b2%e0%b3%87/
21. Father Muller College of Nursing strengthens academic excellence through four strategic MoUs
https://www.daijiworld.com/news/newsDisplay?newsID=1320644
22. Mangaluru: St Aloysius University holds workshop on intellectual property rights
https://www.daijiworld.com/news/newsDisplay?newsID=1320671
23. ಸಂತ ಅಲೋಶಿಯಸ್ ವಿಶ್ವವಿದ್ಯಾಲಯ: ಬೌದ್ಧಿಕ ಆಸ್ತಿ ಹಕ್ಕುಗಳ ಕುರಿತು ಕಾರ್ಯಾಗಾರ
https://www.upayuktha.com/2026/07/St.-Aloysius-University-Workshop-on-Intellectual-Property-Rights.html
24. Mangaluru: St Aloysius University holds induction programme for BTech students
https://www.daijiworld.com/news/newsDisplay?newsID=1321352
25. St Aloysius University Ranked Among India's Greenest Universities in NGUR 2026
https://newskarnataka.com/education/st-aloysius-university-ranked-among-indias-greenest-universities-in-ngur-2026/30072026/#google_vignette
26. Mangaluru: St Aloysius University ranked among India's greenest institutions
https://www.daijiworld.com/news/newsDisplay?newsID=1321413
27. ದೇಶದ ಹಸಿರು ವಿಶ್ವದ್ಯಾಲಯಗಳ ಪೈಕಿ ಸಂತ ಅಲೋಶಿಯಸ್ ಗೆ 23 ನೇ ಸ್ಥಾನ
https://www.upayuktha.com/2026/07/St.-Aloysius-Ranked-23rd-Among-Indias-Green-Universities.html
28. ಸಂತ ಅಲೋಶಿಯಸ್ ವಿವಿ ಗೆ ರಾಷ್ಟ್ರೀಯ ಹಸಿರು ವಿಶ್ವವಿದ್ಯಾಲಯ ಶ್ರೇಯಾಂಕ
https://janamitra.co/national-green-university/

**Dear User,**

**We invite you to visit** https://digitallibrary.staloysius.edu.in **to access the archives of news clippings related to our University. The archive serves as a valuable repository of media coverage, documenting important events, accomplishments, and developments of the University.**